1950

ಶಿವಾನುಭವ ಗ್ರಂಥಮಾಲಾ ನಂ ೩

056

ಮಹಾದೇವಿಯಕ್ಕನ ವಚನಗಳು

ಗ್ರಂಥಾಲಯ

ಸಂಪಾದಕರು

ರಾ॥ ಬ॥ ಫ ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ.

ವಿಜಾಪೂರ.

Acc. No
056

B.16 Mah
Hal.
787

೧೯೫೦.

B/260

ಶಿವಾನುಭವ ಗ್ರಂಥಮಾಲಾ ನಂ. ೩

ನಂ. 6787

ಮಹಾದೇವಿಯಕ್ಕನ

ವಚನಗಳು.

033:16Mah
Hal
6787

ಸಂಪಾದಕರು

ರಾ. ಬ ಫ. ಗು. ಹಳಕಟ್ಟಿ

ಬಿ ಎ. ಎಲ್. ಎಲ್. ಬಿ.

The Vijay College
LIBRARY.
VIJAY COLLEGE,
BIJAPUR.

(ಈ ಗ್ರಂಥದ ಸ್ವಾಮಿತ್ವವು ಕಾದಿಡಲ್ಪಟ್ಟಿದೆ.)

೧೯೫೦

056

— ಓಂ —

ಶಿವಾನುಭವವನ್ನು

ಅತ್ಯಂತವಾಗಿ ಪ್ರೀತಿಸುತ್ತಿದ್ದ

ನನ್ನ ಮಗಳು

ಸರಸ್ವತಿಗೆ

ಅ ರ್ಪ ಣ ವು.

6787

B/260

ಪ್ರಸ್ತಾವನೆ.

(೧ನೇ ಆವೃತ್ತಿ)

ಪೂರ್ವ ಕಾಲದ ಶಿವಶರಣರ ವಚನಗಳು ಬಹುಶಃ ಸಮಗ್ರ
ಎಲ್ಲಿಯೂ ಒತ್ತಟ್ಟಿಗೆ ಸಿಗುವದಿಲ್ಲ. ಅವು ಬೇರೆಬೇರೆ ವಚನ
ಗ್ರಹಗಳಲ್ಲಿ ಖಂಡಶಃ ದೊರೆಯುತ್ತವೆ ಆದ್ದರಿಂದ ಈ ವಚನಗ
ಳು ಇಂಥ ಸಂಗ್ರಹ ಗ್ರಂಥಗಳೊಳಗಿಂದ ಆರಿಸಿ ಬೇರೆ ತೆಗೆದು
ಯಾ ವಚನಕಾರರ ಗ್ರಂಥಗಳನ್ನು ರಚಿಸಬೇಕಾಗುತ್ತದೆ. ಈಗ
ವು ವಾಚಕರ ಮುಂದೆ ಇಟ್ಟ ಮಹಾದೇವಿಯಕ್ಕನ ವಚನ
ಥವು ಈ ಪ್ರಕಾರ ರಚಿಸಲ್ಪಟ್ಟದ್ದಾಗಿದೆ ನಮಗೆ ದೊರೆದ ೧೨
ನ ಸಂಗ್ರಹಗಳೊಳಗಿನ ವಚನಗಳನ್ನು ಬೇರೆ ತೆಗೆದು ಅವುಗಳನ್ನು
ಗ್ರಂಥದಲ್ಲಿ ಸೇರ್ಪಡೆ ಮಾಡಿದ್ದಾಗಿದೆ. ವಚನ ಸಂಗ್ರಹಗಳಲ್ಲಿ ಈ
ನಗಳು ಯಾವ ವಿಷಯಕ್ಕನುಸಾರವಾಗಿಯೂ ಇರದೆ ಅತ್ಯಂತ
ವಸ್ಥಿತವಾಗಿ ದೊರಕುತ್ತವೆ. ಆದರೆ ಅವೆಲ್ಲವುಗಳನ್ನು ಒತ್ತಟ್ಟಿಗೆ
ಸಿ ಯಾವ ಪದ್ಧತಿಯ ಮೇರೆಗೆ "ವಚನಶಾಸ್ತ್ರಸಾರ" ಗ್ರಂಥವು
ಸಲ್ಪಟ್ಟಿದೆಯೋ, ಅದೇ ಮಾದರಿಯ ಮೇಲೆ ಈ ಗ್ರಂಥವು
ಸಲ್ಪಟ್ಟಿದೆ.

ಮಹಾದೇವಿಯಕ್ಕನ ನಿಜವಾದ ಚರಿತ್ರೆಯು ಇನ್ನೂ ಪೂರ್ಣವಾಗಿ
ಧಿಸಲ್ಪಟ್ಟಿಲ್ಲ. ಚಾಮರಸನು ತನ್ನ ಪ್ರಭುಲಿಂಗ ಲೀಲೆಯಲ್ಲಿ ಈಕೆಯ
ಕೆಲವೊಂದು ವೃತ್ತಾಂತವನ್ನು ಕೊಟ್ಟಿದ್ದಾನೆ. ಅದರ ಮೇಲಿಂದ
ರುವದೇನಂದರೆ, ಈಕೆಯ ತಂದೆಯ ಹೆಸರು ವಿಮಲ ಮತ್ತು
ಯ ಹೆಸರು ಸುಮತಿ. ಇವರು ಮೈಸೂರು ಸಂಸ್ಥಾನದಲ್ಲಿರುವ
ತಡಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆ ಗ್ರಾಮದಲ್ಲಿ ಕೌಶಿಕ
ಜೈನ ಅರಸನು ಆಳುತ್ತಿದ್ದನು. ಅವನು ಒಂದು ದಿವಸ ಮಹಾದೇವಿ

ಯಕ್ಕನನ್ನು ಆಕಸ್ಮಾತ್ತಾಗಿ ನೋಡಲಾಗಿ ಆಕೆಗೆ ಮೋಹಿತನಾಗಿ ಆಕೆಯನ್ನು ಲಗ್ನವಾಗಲು ಇಚ್ಛಿಸಿದನು. ಆದರೆ ವೀರಶೈವರಾಗಿದ್ದ ಆಕೆಯ ತಂದೆ ತಾಯಿಗಳು ಅದಕ್ಕೆ ಒಪ್ಪಲಿಲ್ಲ. ಆಗ ಮಹಾದೇವಿಯಕ್ಕನು ರಾಜನಿಂದ ತನ್ನ ತಂದೆ ತಾಯಿಗಳಿಗೆ ಇದರಿಂದ ಏನಾದರೂ ತೊಂದರೆ ಸಂಭವಿಸಬಹುದೆಂದು ತಿಳಿದು, ಇದನ್ನು ಉಪಾಯದಿಂದ ದೂರಮಾಡಲು ಉದ್ದೇಶಿಸಿ, ಅರಸನ ಅರಮನೆಗೆ ಹೋಗಲಿಕ್ಕೆ ಸಿದ್ಧಳಾದಳು. ಮಹಾದೇವಿಯಕ್ಕನು ಅರಸನನ್ನು ಅಲ್ಲಿ ಕಂಡ ಕಾಲಕ್ಕೆ ತನ್ನ ಒಂದು ಪ್ರತಿಜ್ಞೆಯನ್ನು ಪೂರೈಸಿದರೆ ಮದುವೆಯಾಗುವೆನೆಂದು ಅವನಿಗೆ ಹೇಳಿದಳು. ಅದಕ್ಕೆ ಅರಸನು ಒಪ್ಪಿದನು. ಆಗ ಮಹಾದೇವಿಯಕ್ಕನು:— ನೀನು ವೀರಶೈವ ದೀಕ್ಷೆಯನ್ನು ಹೊಂದಿದರೆ ನಿನ್ನನ್ನು ವರಿಸುವೆನೆಂದು ಹೇಳಿದಳು. ಇದಕ್ಕೆ ಕೌಶಿಕನು ಒಪ್ಪಲಿಲ್ಲ. ಆಗ ಮಹಾದೇವಿಯಕ್ಕನು ಆಜನ್ಮ ಯಾರನ್ನೂ ವರಿಸಲಾರೆನೆಂದು ಪ್ರತಿಜ್ಞೆಯನ್ನು ಮಾಡಿ, ಕೌಶಿಕ ರಾಜನ ಐಶ್ವರ್ಯಾತಿಶಯಗಳನ್ನು ನಿರಾಕರಿಸಿದಳು. ಆಕೆಯ ಈ ತೇಜಃಪುಂಜವಾದ ವರ್ತನೆಗೆ ಅರಸನು ಆಶ್ಚರ್ಯಚಕಿತನಾದನು. ಆಗ ಅವನ ವಿಷಯ ವಾಸನೆಯು ಅಡಗಿತು ಮತ್ತು ಆಕೆಗೆ ಕೈ ಹಚ್ಚಲು ಹಿಂದೆಗೆದನು. ಆಗ ಮಹಾದೇವಿಯಕ್ಕನು ತನ್ನ ಬಂಧು ಬಳಗವನ್ನೂ ಐಶ್ವರ್ಯವನ್ನೂ ತೊರೆದು ಧರ್ಮಾಸಕ್ತಳಾಗಿ ಕಲ್ಯಾಣ ನಗರಕ್ಕೆ ಬಸವೇಶ್ವರನಿದ್ದಲ್ಲಿಗೆ ಹೊರಟಳು. ಆಕೆಯು ಕಲ್ಯಾಣವನ್ನು ಸೇರಿ ಬಸವೇಶ್ವರನ ಜೊತೆಯಲ್ಲಿಯೇ ಕಾಲಕಳೆಯಲಾರಂಭಿಸಿದಳು. ಅಲ್ಲಿ ಬಸವೇಶ್ವರನ ಶಿವಾನುಭವ ಮಂಟಪದಲ್ಲಿ ಶಿವಶರಣರೊಂದಿಗೆ ಆಕೆಯು ಉಚ್ಚತಮ ವಿಚಾರಗಳನ್ನು ಪ್ರಕಟ ಮಾಡುತ್ತಿದ್ದಳು. ಇದರಿಂದ ಮಹಾದೇವಿಯಕ್ಕನು ಎಲ್ಲರಲ್ಲಿಯೂ ಅತ್ಯಂತ ಪೂಜ್ಯತೆಯನ್ನು ಹೊಂದಿದಳು. ಆಕೆಯ ಮಹತ್ವವು ಶಿವಾನುಭವ ಮಂಟಪದಲ್ಲಿ ಎಷ್ಟಿತ್ತೆಂಬುದು ಚನ್ನಬಸವೇಶ್ವರನ ಕೆಳಗಿನ ವಚನದಿಂದ ಸ್ಪಷ್ಟವಾಗಿ ಕಂಡು ಬರುವಂತೆ ಇದೆ.

"ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆಟ್ಟ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ!? ನಡುಮುರಿದು, ತಲೆ ನಡುಗಿ, ನೆರೆತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು, ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದು ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕನಿಗಾಯಿತ್ತು"

ಬಸವೇಶ್ವರನ ಕಾಲಕ್ಕೆ ಶಿವಶರಣರು ಅಸಂಖ್ಯ ವಚನಗಳನ್ನು ರಚಿಸಿ ಧರ್ಮಪ್ರಸಾರವನ್ನು ಮಾಡಿದ್ದಾರೆ. ಅದರಂತೆಯೇ ಮಹಾದೇವಿಯಕ್ಕನೂ ಅನೇಕ ವಚನಗಳನ್ನು ರಚಿಸಿದ್ದಾಳೆ ಇವು ಎಷ್ಟು ಶ್ರೇಷ್ಠತರದವಿರುತ್ತದೆಂಬುದು ನಾವು ಪ್ರಸಿದ್ಧಿಸಿದ ಈಗಿನ ಗ್ರಂಥದಿಂದ ತಿಳಿದು ಬರುವಂತೆ ಇದೆ. ಇವು ಅತ್ಯಂತ ಮಧುರವೂ, ಭಾವಗರ್ಭಿತವೂ ಇರುತ್ತವೆ. ಇವುಗಳ ಮಹತ್ವವನ್ನು ಚನ್ನಬಸವೇಶ್ವರನು ಕೆಳಗೆ ಬರೆದ ಮೇರೆಗೆ ವರ್ಣಿಸಿದ್ದಾನೆ

"ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜ
ಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಮಹಾ
ದೇವಿಯಕ್ಕನ ಒಂದು ವಚನ ಕಾಣಾ ಸಿದ್ಧರಾಮಯ್ಯ"

ಈ ಮೇರೆಗೆ ಮಹಾದೇವಿಯಕ್ಕನು ಬಸವೇಶ್ವರನು ಕಲ್ಯಾಣದಲ್ಲಿ ಇರುವ ವರೆಗೂ ಅಲ್ಲಿಯೇ ಇದ್ದಳು. ಮುಂದೆ ವೀರಶೈವರಿಗೂ ಜೈನರಿಗೂ ಕಲಹಗಳು ಉಂಟಾಗಲು ಶರಣರ ಒಂದು ತಂಡವು ಉಳಿವೆಯ ಕಡೆಗೆ ಹೋಯಿತು. ಮತ್ತೊಂದು ತಂಡವು ಶ್ರೀಶೈಲಮಲ್ಲಿಕಾರ್ಜುನನ ಕಡೆಗೆ ತೆರಳಿತು. ಆಗ ಮಹಾದೇವಿಯಕ್ಕನು ಅಲ್ಲಮಪ್ರಭುವಿನೊಡನೆ ತನ್ನ ಇಷ್ಟ ದೇವತೆಯಾದ ಶ್ರೀಶೈಲ ಮಲ್ಲಿಕಾರ್ಜುನನ ಕಡೆಗೆ

ಹೋದಳು ಮತ್ತು ಅಲ್ಲಿ ಕದಳಿಯ ಬನದಲ್ಲಿ ಶಿವಸಾಯುಜ್ಯವನ್ನು ಹೊಂದಿದಳು.

ಯಾರಲ್ಲಾದರೂ ಮಹಾದೇವಿಯಕ್ಕನ ವಚನಗಳಿದ್ದರೆ, ಅವರು ಅವುಗಳನ್ನು ನಮ್ಮ ಕಡೆಗೆ ಕಳಿಸಿದಲ್ಲಿ ಅವುಗಳನ್ನು ಈ ಗ್ರಂಥದ ಮುಂದಿನ ಆವೃತ್ತಿಯಲ್ಲಿ ಸೇರಿಸುವೆವು. ಈ ಪ್ರಕಾರ ಅವರು ಈ ಮಹಾತ್ಮಳ ವಿಚಾರಗಳನ್ನು ಪ್ರಕಟ ಮಾಡುವ ನಮ್ಮ ಕಾರ್ಯದಲ್ಲಿ ಸಹಾಯಕರಾಗಬೇಕೆಂದು ಪ್ರಾರ್ಥಿಸುತ್ತೇವೆ.

ವಿಜಾಪುರ
ತಾ॥ ೨೩—೭—೨೭ }

ಫ ಗು. ಹಳಕಟ್ಟಿ.

ಪ್ರಸ್ತಾವನೆ.

(೧ನೇ ಆವೃತ್ತಿ)

ಪೂರ್ವ ಕಾಲದ ಶಿವಶರಣರ ವಚನಗಳು ಬಹುಶಃ ಸಮಗ್ರವಾಗಿ ಎಲ್ಲಿಯೂ ಒತ್ತಟ್ಟಿಗೆ ಸಿಗುವದಿಲ್ಲ. ಅವು ಬೇರೆಬೇರೆ ವಚನ ಸಂಗ್ರಹಗಳಲ್ಲಿ ಖಂಡಶಃ ದೊರೆಯುತ್ತವೆ ಆದ್ದರಿಂದ ಈ ವಚನಗಳನ್ನು ಇಂಥ ಸಂಗ್ರಹ ಗ್ರಂಥಗಳೊಳಗಿಂದ ಆರಿಸಿ ಬೇರೆ ತೆಗೆದು ಆಯಾ ವಚನಕಾರರ ಗ್ರಂಥಗಳನ್ನು ರಚಿಸಬೇಕಾಗುತ್ತದೆ. ಈಗ ನಾವು ವಾಚಕರ ಮುಂದೆ ಇಟ್ಟ ಮಹಾದೇವಿಯಕ್ಕನ ವಚನ ಗ್ರಂಥವು ಈ ಪ್ರಕಾರ ರಚಿಸಲ್ಪಟ್ಟದ್ದಾಗಿದೆ ನಮಗೆ ದೊರೆದ ೧೨ ವಚನ ಸಂಗ್ರಹಗಳೊಳಗಿನ ವಚನಗಳನ್ನು ಬೇರೆ ತೆಗೆದು ಅವುಗಳನ್ನು ಈ ಗ್ರಂಥದಲ್ಲಿ ಸೇರ್ಪಡೆ ಮಾಡಿದ್ದಾಗಿದೆ. ವಚನ ಸಂಗ್ರಹಗಳಲ್ಲಿ ಈ ವಚನಗಳು ಯಾವ ವಿಷಯಕ್ಕನುಸಾರವಾಗಿಯೂ ಇರದೆ ಅತ್ಯಂತ ಅವ್ಯವಸ್ಥಿತವಾಗಿ ದೊರಕುತ್ತವೆ. ಆದರೆ ಅವೆಲ್ಲವುಗಳನ್ನು ಒತ್ತಟ್ಟಿಗೆ ಕೂಡಿಸಿ ಯಾವ ಪದ್ಧತಿಯ ಮೇರೆಗೆ "ವಚನಶಾಸ್ತ್ರಸಾರ" ಗ್ರಂಥವು ರಚಿಸಲ್ಪಟ್ಟದೆಯೋ, ಅದೇ ಮಾದರಿಯ ಮೇಲೆ ಈ ಗ್ರಂಥವು ರಚಿಸಲ್ಪಟ್ಟದೆ.

ಮಹಾದೇವಿಯಕ್ಕನ ನಿಜವಾದ ಚರಿತ್ರೆಯು ಇನ್ನೂ ಪೂರ್ಣವಾಗಿ ಶೋಧಿಸಲ್ಪಟ್ಟಿಲ್ಲ. ಚಾಮರಸನು ತನ್ನ ಪ್ರಭುಲಿಂಗ ಲೀಲೆಯಲ್ಲಿ ಈಕೆಯ ಬಗ್ಗೆ ಕೆಲವೊಂದು ವೃತ್ತಾಂತವನ್ನು ಕೊಟ್ಟಿದ್ದಾನೆ. ಅದರ ಮೇಲಿಂದ ತಿಳಿಯುವದೇನಂದರೆ, ಈಕೆಯ ತಂದೆಯ ಹೆಸರು ವಿಮಲ ಮತ್ತು ತಾಯಿಯ ಹೆಸರು ಸುಮತಿ. ಇವರು ಮೈಸೂರು ಸಂಸ್ಥಾನದಲ್ಲಿರುವ ಉಡುತಡಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆ ಗ್ರಾಮದಲ್ಲಿ ಕೌಶಿಕನೆಂಬ ಜೈನ ಅರಸನು ಆಳುತ್ತಿದ್ದನು. ಅವನು ಒಂದು ದಿವಸ ಮಹಾದೇವಿ

ಯಕ್ಕನನ್ನು ಅಕಸ್ಮಾತ್ತಾಗಿ ನೋಡಲಾಗಿ ಆಕೆಗೆ ಮೋಹಿತನಾಗಿ ಆಕೆ
ಯನ್ನು ಲಗ್ನವಾಗಲು ಇಚ್ಛಿಸಿದನು. ಆದರೆ ವೀರಶೈವರಾಗಿದ್ದ ಆಕೆಯ
ತಂದೆ ತಾಯಿಗಳು ಅದಕ್ಕೆ ಒಪ್ಪಲಿಲ್ಲ. ಆಗ ಮಹಾದೇವಿಯಕ್ಕನು
ರಾಜನಿಂದ ತನ್ನ ತಂದೆ ತಾಯಿಗಳಿಗೆ ಇದರಿಂದ ಏನಾದರೂ ತೊಂದರೆ
ಸಂಭವಿಸಬಹುದೆಂದು ತಿಳಿದು, ಇದನ್ನು ಉಪಾಯದಿಂದ ದೂರಮಾ
ಡಲು ಉದ್ದೇಶಿಸಿ, ಅರಸನ ಅರಮನೆಗೆ ಹೋಗಲಿಕ್ಕೆ ಸಿದ್ಧಳಾದಳು.
ಮಹಾದೇವಿಯಕ್ಕನು ಅರಸನನ್ನು ಅಲ್ಲಿ ಕಂಡ ಕಾಲಕ್ಕೆ ತನ್ನ ಒಂದು
ಪ್ರತಿಜ್ಞೆಯನ್ನು ಪೂರೈಸಿದರೆ ಮದುವೆಯಾಗುವೆನೆಂದು ಅವನಿಗೆ ಹೇಳಿ
ದಳು. ಆದಕ್ಕೆ ಅರಸನು ಒಪ್ಪಿದನು. ಆಗ ಮಹಾದೇವಿಯಕ್ಕನು:—
ನೀನು ವೀರಶೈವ ದೀಕ್ಷೆಯನ್ನು ಹೊಂದಿದರೆ ನಿನ್ನನ್ನು ವರಿಸುವೆನೆಂದು
ಹೇಳಿದಳು. ಇದಕ್ಕೆ ಕೌಶಿಕನು ಒಪ್ಪಲಿಲ್ಲ. ಆಗ ಮಹಾದೇವಿಯಕ್ಕನು
ಆಜನ್ಮ ಯಾರನ್ನೂ ವರಿಸಲಾರೆನೆಂದು ಪ್ರತಿಜ್ಞೆಯನ್ನು ಮಾಡಿ, ಕೌಶಿಕ
ರಾಜನ ಐಶ್ವರ್ಯಾತಿಶಯಗಳನ್ನು ನಿರಾಕರಿಸಿದಳು. ಆಕೆಯ ಈ
ತೇಜಃಪುಂಜವಾದ ವರ್ತನೆಗೆ ಅರಸನು ಆಶ್ಚರ್ಯಚಕಿತನಾದನು.
ಆಗ ಅವನ ವಿಷಯ ವಾಸನೆಯು ಅಡಗಿತು ಮತ್ತು ಆಕೆಗೆ ಕೈ
ಹಚ್ಚಲು ಹಿಂದೆಗೆದನು. ಆಗ ಮಹಾದೇವಿಯಕ್ಕನು ತನ್ನ ಬಂಧು
ಬಳಗವನ್ನೂ ಐಶ್ವರ್ಯವನ್ನೂ ತೊರೆದು ಧರ್ಮಾಸಕ್ತಳಾಗಿ ಕಲ್ಯಾಣ
ನಗರಕ್ಕೆ ಬಸವೇಶ್ವರನಿದ್ದಲ್ಲಿಗೆ ಹೊರಟಳು. ಆಕೆಯು ಕಲ್ಯಾಣವನ್ನು
ಸೇರಿ ಬಸವೇಶ್ವರನ ಜೊತೆಯಲ್ಲಿಯೇ ಕಾಲಕಳೆಯಲಾರಂಭಿಸಿದಳು
ಅಲ್ಲಿ ಬಸವೇಶ್ವರನ ಶಿವಾನುಭವ ಮಂಟಪದಲ್ಲಿ ಶಿವಶರಣರೊಂದಿಗೆ
ಆಕೆಯು ಉಚ್ಚತಮ ವಿಚಾರಗಳನ್ನು ಪ್ರಕಟ ಮಾಡುತ್ತಿದ್ದಳು. ಇದ
ರಿಂದ ಮಹಾದೇವಿಯಕ್ಕನು ಎಲ್ಲರಲ್ಲಿಯೂ ಅತ್ಯಂತ ಪೂಜ್ಯತೆಯನ್ನು
ಹೊಂದಿದಳು. ಆಕೆಯ ಮಹತ್ವವು ಶಿವಾನುಭವ ಮಂಟಪದಲ್ಲಿ
ಎಷ್ಟಿತ್ತೆಂಬುದು ಚನ್ನಬಸವೇಶ್ವರನ ಕೆಳಗಿನ ವಚನದಿಂದ ಸ್ಪಷ್ಟವಾಗಿ
ಕಂಡು ಬರುವಂತೆ ಇದೆ.

“ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ
ಬೆಟ್ಟ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ!? ನಡುಮುರಿದು, ತಲೆ
ನಡುಗಿ, ನೆರೆತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡ ಹೋಗಿ
ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುಮರಿದು,
ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದು ಕೂಡಲ
ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ
ಮಹಾದೇವಿಯಕ್ಕನಿಗಾಯಿತ್ತು ”

ಬಸವೇಶ್ವರನ ಕಾಲಕ್ಕೆ ಶಿವಶರಣರು ಅಸಂಖ್ಯ ವಚನಗಳನ್ನು
ರಚಿಸಿ ಧರ್ಮಪ್ರಸಾರವನ್ನು ಮಾಡಿದ್ದಾರೆ. ಅದರಂತೆಯೇ ಮಹಾ
ದೇವಿಯಕ್ಕನೂ ಅನೇಕ ವಚನಗಳನ್ನು ರಚಿಸಿದ್ದಾಳೆ ಇವು ಎಷ್ಟು
ಶ್ರೇಷ್ಠತರದವಿರುತ್ತದೆಂಬುದು ನಾವು ಪ್ರಸಿದ್ಧಿಸಿದ ಈಗಿನ ಗ್ರಂಥದಿಂದ
ತಿಳಿದು ಬರುವಂತೆ ಇದೆ. ಇವು ಅತ್ಯಂತ ಮಧುರವೂ, ಭಾವಗರ್ಭಿ
ತವೂ ಇರುತ್ತವೆ. ಇವುಗಳ ಮಹತ್ವವನ್ನು ಚನ್ನಬಸವೇಶ್ವರನು ಕೆಳಗೆ
ಬರೆದ ಮೇರೆಗೆ ವರ್ಣಿಸಿದ್ದಾನೆ

“ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜ
ಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಮಹಾ
ದೇವಿಯಕ್ಕನ ಒಂದು ವಚನ ಕಾಣಾ ಸಿದ್ಧರಾಮಯ್ಯ ”

ಈ ಮೇರೆಗೆ ಮಹಾದೇವಿಯಕ್ಕನು ಬಸವೇಶ್ವರನು ಕಲ್ಯಾಣದಲ್ಲಿ
ಇರುವ ವರೆಗೂ ಅಲ್ಲಿಯೇ ಇದ್ದಳು. ಮುಂದೆ ವೀರಶೈವರಿಗೂ ಜೈನ
ರಿಗೂ ಕಲಹಗಳು ಉಂಟಾಗಲು ಶರಣರ ಒಂದು ತಂಡವು ಉಳಿವೆಯ
ಕಡೆಗೆ ಹೋಯಿತು. ಮತ್ತೊಂದು ತಂಡವು ಶ್ರೀಶೈಲಮಲ್ಲಿಕಾರ್ಜು
ನನ ಕಡೆಗೆ ತೆರಳಿತು. ಆಗ ಮಹಾದೇವಿಯಕ್ಕನು ಅಲ್ಲಮಪ್ರಭುವಿ
ನೊಡನೆ ತನ್ನ ಇಷ್ಟ ದೇವತೆಯಾದ ಶ್ರೀಶೈಲ ಮಲ್ಲಿಕಾರ್ಜುನನ ಕಡೆಗೆ

ಹೋದಳು ಮತ್ತು ಅಲ್ಲಿ ಕದಳಿಯ ಬನದಲ್ಲಿ ಶಿವಸಾಯುಜ್ಯವನ್ನು ಹೊಂದಿದಳು.

ಯಾರಲ್ಲಾದರೂ ಮಹಾದೇವಿಯಕ್ಕನ ವಚನಗಳಿದ್ದರೆ, ಅವರು ಅವುಗಳನ್ನು ನಮ್ಮ ಕಡೆಗೆ ಕಳಿಸಿದಲ್ಲಿ ಅವುಗಳನ್ನು ಈ ಗ್ರಂಥದ ಮುಂದಿನ ಆವೃತ್ತಿಯಲ್ಲಿ ಸೇರಿಸುವೆವು. ಈ ಪ್ರಕಾರ ಅವರು ಈ ಮಹಾತ್ಮಳ ವಿಚಾರಗಳನ್ನು ಪ್ರಕಟ ಮಾಡುವ ನಮ್ಮ ಕಾರ್ಯದಲ್ಲಿ ಸಹಾಯಕರಾಗಬೇಕೆಂದು ಪ್ರಾರ್ಥಿಸುತ್ತೇವೆ.

ವಿಜಾಪುರ
ತಾ॥ ೨೩—೭—೨೭

ಫ ಗು. ಹಳಕಟ್ಟಿ.

ಪ್ರಸ್ತಾವನೆ.

(೬ ನೆಯ ಆವೃತ್ತಿ)

ಇದು ಮಹಾದೇವಿಯಕ್ಕನ ವಚನಗಳ ೬ನೆಯ ಆವೃತ್ತಿಯು. ಹಿಂದಿನ ಆವೃತ್ತಿಗಳಲ್ಲಿರುವ ಪದ್ಧತಿಯನ್ನೇ ಇದರಲ್ಲಿಯೂ ಅನುಸರಿಸಿದ್ದೇವೆ.

ವಿಜಾಪುರ
ತಾ || ೭-೮-೫೦

ಫ ಗು ಹಳಕಟ್ಟಿ
ಸಂಪಾದಕ

ಮಹಾದೇವಿಯಕ್ಕನ ವಚನಗಳು.

ಪರಮಾತ್ಮನ ಸ್ವರೂಪ.

೧. ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರನೆರೆದವರಾರಯ್ಯಾ! ಕಬ್ಬು ಬಾಳೆ ಹಲಸು ನಾರಿಕೇಳಕ್ಕೆ ಸಿಹಿ ನೀರನೆರೆದವರಾರಯ್ಯಾ! ಕಳವೆ ಶಾಲಿಗೆ ಓಗರದ ಉದಕವನೆರೆದವರಾರಯ್ಯಾ! ಮರುಗ ಮಲ್ಲಿಗೆ ಪಚ್ಚೆಗೆ ಪರಿಮಳದುದಕವನೆರೆದವರಾರಯ್ಯಾ! ಇಂತೀ ಜಲವು ಒಂದೆ, ನೆಲವು ಒಂದೆ, ಆಕಾಶವು ಒಂದೆ. ಒಂದೇ ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿ ಹಾಗೆ ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದರೇನು ? ತನ್ನ ಪರಿ ಬೇರೆ.

ಈಳೆ = ಕಿತ್ತಳೆ ಅಥವಾ ಕಂಚೀಗಿಡ; ಮಾದಲು = ಮಾದಾಳದ ಗಿಡ; ನಾರಿಕೇಳ = ತೆಂಗು; ಕಳವೆ = ಕವಳೀಹಣ್ಣಿನ ಗಿಡ; ಶಾಲಿ = ಬತ್ತ; ಓಗರ = ಅನ್ನ.

೨. ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚನ್ನಮಲ್ಲಿಕಾರ್ಜುನನ ನಿಲವನಾರು ಅರಿಯಬಾರದು.

ನಿಧಾನ = ದ್ರವ್ಯ; ಹೇಮ = ಬಂಗಾರ; ತಿಲ = ಎಣ್ಣೆ; ನಿಲವು = ಸ್ಥಿತಿ, ರೀತಿ.

೩. ನೆಲದ ಮರೆಯ ನಿಕ್ಷೇಪದಂತೆ, ಸಿಲೆಯ ಮರೆಯ ಕನಕದಂತೆ, ತಿಲದ ಮರೆಯ ತೈಲದಂತೆ, ಮರದ ಮರೆಯ ತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು.

ನಿಕ್ಷೇಪ = ದ್ರವ್ಯ

೪. ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ. ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

ಖಗ = ಪಕ್ಷಿ.

೫. ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನು. ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಂಗಳಲ್ಲಿ. ಇಂತೆನ್ನ ಚೆನ್ನಮಲ್ಲಿಕಾರ್ಜುನದೇವನೆಂಬ ಪರಶಿವನು ತನ್ನ ಜಗದ್ವಿಲಾಸ ಸಾಕಾದಡೆ ಮತ್ತೆ ತಾನೇ ಪರಿವನದರ ಮಾಯಾಪಾಶವನು.

ಪರಿ = ಹರಿ, ನಾಶಮಾಡು.

೬. ಅರಿದೆನೆಂದರೆ ಅರಿಯಬಾರದು ನೋಡಾ! ಘನಕ್ಕೆ ಘನ ತಾನೇ ನೋಡಾ! ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಪೋದೆನು.

ಸಂಸಾರವು ಹೇಯವಾದುದು.

೧. ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ, ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ ಬೇವುತ್ತಿದೇನೆ. ಅಯ್ಯ! ಎನ್ನ ಮನದ ದುರಾಸೆಯ ಮಾಣಿಸಿ ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ.

ಸ್ನೇಹ = ಜಿಗಟು, ಎಣ್ಣೆ; ಮಾಣಿಸಿ = ಬಿಡಿಸಿ.

೮. ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯ! ಏವೆನೇವೆನಯ್ಯಾ! ಅಂದಂದಿನ ದಂದುಗಕ್ಕೆ ಏವೆನೇವೆನಯ್ಯ! ಬೆಂದ ಒಡಲ ಹೊರೆವುದಕ್ಕೆ ನಾನಾರೆ. ಚೆನ್ನಮಲ್ಲಿಕಾರ್ಜುನಯ್ಯ, ಕೊಲ್ಲು, ಕಾಯಿ, ನಿಮ್ಮ ಧರ್ಮ.

ಏವೆನು = ಏನು ಮಾಡಲಿ; ದಂದುಗ = ತೊಂದರೆ; ಒಡಲ = ಶರೀರ; ಆರೆ = ಶಕ್ತನಲ್ಲ.

೯. ಜೋಳಿಯನೆಂದು ನಂಬಬೇಡ. ಡಾಳಕನವರು ಜಗದ ಬಿನ್ನಾಣಿ. ಬಾಣ ಮಯೂರ ಕಾಳಿದಾಸ ಓಹಿಲನುದ್ಭಟ ಮಲುಹಣ ನವಂಗಿತ್ತ ಪರಿ ಬೇರೆ. ಮುಕ್ತಿ ಭುಕ್ತಿಯ ತೋರಿ ಭಕ್ತಿಯ ಮರಸಿಕೊಂಬನು ಚೆನ್ನಮಲ್ಲಿಕಾರ್ಜುನನು.

ಜೋಳಿಯ = ದೇವತೆ; ಡಾಳಕನವರು = ಹೊಳಪುಳ್ಳವರು; ಬಿನ್ನಾಣಿ ಜಾಣತನವುಳ್ಳವ; ಭುಕ್ತಿ = ಇಂದ್ರಿಯ ಸುಖ.

೧೦. ಸಂಸಾರವೆಂಬ ಹಗೆಯಯ್ಯ ತಂದೆ. ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ! ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ! ನಿಮ್ಮ ಮರೆಪೊಕ್ಕೆ ಕಾಯಯ್ಯ! ಎನ್ನ ಬಿನ್ನಪವನವಧಾರು, ಚೆನ್ನಮಲ್ಲಿಕಾರ್ಜುನಾ.

ಅರಸು = ಹುಡುಕು; ಬಿನ್ನಪ = ವಿನಂತಿ; ಅವಧಾರು = ಲಕ್ಷಿಸು.

೧೧. ಎನ್ನ ಮಾಯದ ಮದವ ಮುರಿಯಯ್ಯ! ಎನ್ನ ಕಾಯದ ಕತ್ತಲೆಯ ಕಳೆಯಯ್ಯ! ಎನ್ನ ಜೀವದ ಜಂಜಡವ ಮಾಣಿಸಯ್ಯ! ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವಯ್ಯ, ಎನ್ನ ಸುತ್ತಿದ ಪ್ರಪಂಚವ ಬಿಡಿಸು, ನಿಮ್ಮ ಧರ್ಮ.

ಜಂಜಡ = ತೊಂದರೆ; ಮಾಣಿಸು = ದೂರಮಾಡು.

೧೨. ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ, ಎಂಬತ್ತುನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ- ಬಾರದ ಭವಗಳನುಂಡೆನುಂಡೆ.

ಶುಭಾಶುಭಂಗಳ ಹಿಂದಣ ಜನ್ಮಾಂಗಳೇನಾದರೂ ಆಗಲಿ! ಮುಂದೆ ನೀ ಕರುಣಿಸಾ ಚನ್ನಮಲ್ಲಿಕಾರ್ಜುನಾ.

ಭವ = ಜನ್ಮ

೧೩. ಊರ ಸೀರೆಗೆ ಅಸಗ ತಡಬಡಗೊಂಬಂತೆ ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು, ಎಂದು ನೆನೆನೆನೆದು ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯ ಚನ್ನಮಲ್ಲಿಕಾರ್ಜುನಯ್ಯ.

ಅಸಗ = ಅಗಸ; ತಡಬಡಗೊಳ್ಳು = ಮೇಲಾಡು; ಕೆಮ್ಮನೆ = ವ್ಯರ್ಥವಾಗಿ.

೧೪. ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ. ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ. ಥಾಪು ಸಂಸಾರವೆ! ಬೆನ್ನಿಂದ ಬೆನ್ನ ಹತ್ತಿ ಬಂದೆ. ಚನ್ನಮಲ್ಲಿಕಾರ್ಜುನಯ್ಯ ಇನ್ನೇವೆನಿನ್ನೇವೆ?

ಥಾಪು = ಶಹಬಾಸ; ಇನ್ನೇವೆ = ಇನ್ನೇನು ಮಾಡಲಿ.

೧೫. ಆಲಿಸೆನ್ನ ಬಿನ್ನಹವ. ಪಾಲಿಸೆನ್ನ ಬಿನ್ನಪವ. ಲಾಲಿಸೆನ್ನ ಬಿನ್ನಪವ. ಏಕೆನ್ನ ಮೊರೆಯ ನೋಡೆನ್ನ ದುಃಖವ ಚನ್ನಮಲ್ಲಿಕಾರ್ಜುನಯ್ಯಾ?

ಆಲಿಸು = ಕೇಳು; ಲಾಲಿಸು = ಲಕ್ಷ್ಯಗೊಟ್ಟು ಕೇಳು; ಬಿನ್ನಪ = ವಿನಂತಿ; ಮೊರೆ = ಬೇಡಿಕೆ.

೧೬. ಕೋಲತುದಿಯ ಕೋಡಗನಂತೆ, ನೇಣತುದಿಯ ಬೊಂಬೆಯಂತೆ, ಆಡಿದೆನಯ್ಯ ನೀನಾಡಿಸಿದಂತೆ. ಅನುಡಿದೆನಯ್ಯ ನೀನು ನುಡಿಸಿದಂತೆ. ಆನು ಇದ್ದೆನಯ್ಯ ನೀನು ಇರಿಸಿದಂತೆ. ಜಗದ ಯಂತ್ರವಾಹಕ ಚನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ.

ನೇಣು = ಹಗ್ಗ; ಬೊಂಬೆ = ಗೊಂಬೆ.

೧೭. ಬಲ್ಲಿದನ ಹಗೆಯು ತೆಗೆವನ್ನಬರ ಬಡವನ ಹರಣ ಹೋದ ತೆರನಂತಾಯಿತ್ತು. ನೀ ಕಾಡಿ ನೋಡುವನ್ನಬರ, ಎನಗಿದು ವಿಧಿಯೋ ಹೇಳಾ ತಂದೆ? ಮೂರುವಾರುವನ್ನಬರ, ಒಮ್ಮೆ ಗಾಳಿಗೆ ಹಾರಿ ಹೋದ ತೆರನಂತಾಯಿತ್ತು. ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯ ಚನ್ನಮಲ್ಲಿಕಾರ್ಜುನ.?

ಬಲ್ಲಿದ = ಶಕ್ತಿವಂತ; ಹರಣ = ಜೀವ.

೧೮. ಪುಣ್ಯಪಾಪಂಗಳನರಿಯದ ಮೊದಲು, ಅನೇಕ ಭವಂಗಳಲ್ಲಿ ಬಂದೆನಯ್ಯಾ! ನಂಬಿ ಶರಣುವೊಕ್ಕೆನಯ್ಯಾ! ನಿಮ್ಮನೆಂದೂ ಅಗಲದಂತೆ ಮಾಡಿ ನಡಿಸಯ್ಯಾ! ನಿಮ್ಮ ಧರ್ಮ, ನಿಮ್ಮ ಧರ್ಮ. ನಿಮ್ಮನೊಂದನೇ ಬೇಡುವೆನು. ಎನ್ನ ಬಂಧನವ ಬಿಡುವಂತೆ ಮಾಡಯ್ಯಾ ಶ್ರೀ ಚನ್ನಮಲ್ಲಿಕಾರ್ಜುನಾ.

೧೯. ಆವಾಗಳು ಎನ್ನ ಮನ ಉದರಕ್ಕೆ ಹರಿವುದು. ಕಾಣಲಾರೆನಯ್ಯ ನಿಮ್ಮುವನು. ಭೇದಿಸಲರಿಯೆನಯ್ಯ! ಮಾಯದ ಸಂಸಾರದಲ್ಲಿ ಸಿಲುಕಿದೆನು. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ.

ಭೇದಿಸು = ತಿಳಿ; ಹೊದ್ದು = ಹತ್ತಿರಿರು.

೨೦. ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ, ಸುಡಲೀ ದೇಹವ- ಒಡಲವಿಡಿದು ಕೆಡದಿರು. ಚನ್ನಮಲ್ಲಿಕಾರ್ಜುನನರಿ ಮರುಳೇ.

ಅಮೇಧ್ಯ = ಅಶುದ್ಧ ವಸ್ತು, ಮಲ; ಹಡಿಕೆ = ಹೊಲಸು; ತಡಿಕೆ = ಬಿದಿರಿನ ತಟ್ಟಿ; ಒಡಲು = ಶರೀರ; ಕೆಡೆ = ಕೆಟ್ಟುಹೋಗು.

೨೧. ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ.

ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ. ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ. ಚನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲಲಾರರು.

ನೆಳಲು = ಆಶ್ರಯ; ನೆನಹು = ಧ್ಯಾನ; ಅರಿವು = ತಿಳಿವಳಿಕೆ; ಜಂಗುಳಿ = ಜನಸಮುದಾಯ; ಬೆಂಗೋಲ = ಬಾರಕೋಲು.

೨೨. ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ! ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ! ಲೋಕವೆಂಬ ಮಾಯೆಗೆ ಶರಣಚಾರಿತ್ರ ಮರುಳಾಗಿ ತೋರುವುದು ನೋಡಾ! ಚನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆ ಇಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ.

ಚಾರಿತ್ರ = ನಡೆವಳಿಕೆ; ಮರಹು = ಅಜ್ಞಾನ.

೨೩. ಬಿಟ್ಟೆನೆಂದರೆ ಬಿಡದೀ ಮಾಯೆ. ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ. ಸವಣಗೆ ಸವಣಿಯಾಯಿತ್ತು ಮಾಯೆ. ಯತಿಗೆ ಪರಾಕಿಯಾಯಿತ್ತು ಮಾಯೆ. ನಿನ್ನ ಮಾಯೆಗೆ ನಾನಂಜುವಳಲ್ಲ. ಚನ್ನಮಲ್ಲಿಕಾರ್ಜುನದೇವ ನಿಮ್ಮಾಣೆ.

ಸವಣ = ಜೈನ ಸನ್ಯಾಸಿ; ಪರಾಕಿ = ಭಟ್ಟಂಗಿ.

೨೪. ಹರಿಯ ನುಂಗಿತ್ತು ಮಾಯೆ. ಅಜನ ನುಂಗಿತ್ತು ಮಾಯೆ. ಇಂದ್ರನ ನುಂಗಿತ್ತು ಮಾಯೆ. ಚಂದ್ರನ ನುಂಗಿತ್ತು ಮಾಯೆ. ಬಲಿನೆಂಬ ಬಲುಗಯ್ಯರ ನುಂಗಿತ್ತು ಮಾಯೆ. ಅರಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ. ಈರೇಳು ಭುವನವನಾರಡಿಗೊಂಡಿತ್ತು ಮಾಯೆ. ಚನ್ನಮಲ್ಲಿಕಾರ್ಜುನಯ್ಯ, ಎನ್ನ ಮಾಯೆಯ ಮಾಣಿಸಾ ಕರುಣಿ.

ಅಜ = ಬ್ರಹ್ಮ : ಬಲುಗಯ್ಯ = ಗಟ್ಟಿಗ; ಈರೇಳು = ಹದಿನಾಲ್ಕು; ಆರಡಿಗೊಳ್ಳು = ತೊಂದರೆಕೊಡು.

೨೫. ಎನಗೇಕಯ್ಯ ಸಾವ ಪ್ರಪಂಚಿನ ಪುತ್ಥಳಿ? ಮಾಯಿಕದ ಮಲಭಾಂಡ ಆತುರದ ಭವನಿಳಯ ಎನಗೇಕಯ್ಯ? ಬೆರಳು ತಾಳ ಹಣ್ಣ ಹಿಸುಕಿದಡೆ, ಮೆಲಲುಂಟೇ? ಎನ್ನ ತಪ್ಪ ಒಪ್ಪುಗೊಳ್ಳು ಚನ್ನಮಲ್ಲಿಕಾರ್ಜುನದೇವಾ.

ಮಾಯಿಕ = ಮಾಯಾಸಂಬಂಧಿ; ಆತುರ = ಚಿಂತೆ; ನಿಳಯ = ಮನೆ; ಹಿಸುಕು = ಹಿಚುಕು; ಮೆಲು = ತಿನ್ನು; ಒಪ್ಪುಗೊಳ್ಳು = ಕ್ಷಮಿಸು;

೨೬. ಅಯ್ಯಾ ಸರ್ವಮೂಲಾಹಂಕಾರವಿಡಿದು, ಕುಲಭ್ರಮೆ, ಛಲಭ್ರಮೆ, ಜಾತಿಭ್ರಮೆ, ನಾಮ ವರ್ಣ ಆಶ್ರಮ ಮತ ಶಾಸ್ತ್ರಭ್ರಮೆ, ರಾಜ್ಯಭ್ರಮೆ, ಧನಧಾನ್ಯ ಪುತ್ರಮಿತ್ರ ಐಶ್ವರ್ಯ ತ್ಯಾಗ ಯೋಗಭ್ರಮೆ, ಕಾಯ ಕರಣ ವಿಷಯಭ್ರಮೆ, ವಾಯು ಮನ ಭಾವ ಜೀವ ಮೋಹಭ್ರಮೆ, ನಾಹಂ ಕೋಹಂಭ್ರಮೆ, ಶಿವೋಹಂಭ್ರಮೆ, ಮಾಯಾಭ್ರಮೆ ಮೊದಲಾದ ಮೂವತ್ತೆರಡು ಪಾಶಾಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು, ಶಿವಭಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣರ ಶಿವೈಕ್ಯ ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನನಾಚಿ ನಿಮ್ಮಡಿಗಭಿಮುಖವಾಯಿತ್ತಯ್ಯ ಚನ್ನಸುಲ್ಲಿಕಾರ್ಜುನಾ.

ತೊಳಲು = ತಿರುಗಾಡು.

೨೭. ಅಯ್ಯಾ ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ನಿತ್ಯ ನಿರಂಜನ ಗುರ ಲಿಂಗಜಂಗಮ ಶಿವಶರಣರ ಸತ್ಯ ಸನ್ಮಾರ್ಗದ ಗೊತ್ತಿನ ಮರಿಯಾದೆಯನರಿಯದೆ, ಮರ್ತ್ಯದ ಜಡಜೀವಿ ಭವಿಪ್ರಾಣಿಗಳ ಹಾಗೆ ಗುಹ್ಯಾಲಂಪಟಕ್ಕೆಚ್ಚಿಸಿ, ದಾಸಿವೇಶಿಯರ ಕೂಡಿಕೊಂಡು ಭುಂಜಿಸಿ, ಷಟ್‌ಸ್ಥಲ ಬ್ರಹ್ಮಾನುಭಾವವ ಕೇಳಿ ಹೇಳುವ ಮೂಳ ಚುಕ್ಕೆಯರ ಕಂಡು, ಎನ್ನ ಮನ ನಾಚಿತ್ತು ಕಾಣಾ. ಅವ್ವ ನೀಲಮ್ಮನ ಮೋಹದ ಮಗಳೇ,

ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿಯೋ, ನಿಃಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆಯೋ, ಚನ್ನಮಲ್ಲಿಕಾರ್ಜುನನ ಧಾರ್ಮಿಯೋ, ಚಿಕ್ಕಯ್ಯಪ್ರಿಯ ಸಿದ್ಧಲಿಂಗನೊಡಹುಟ್ಟಿದಳೇ, ಕೇಳಣ್ಣ ಇದು ಮರ್ತ್ಯದ ಜಡಜೀವಿ ಭ್ರಷ್ಟರ ಬಾಳುವೆ ಎಂದೆ.

ನಿರಂಜನ = ಶುದ್ಧ; ಗೊತ್ತು = ಆಶ್ರಯಸ್ಥಳ; ಮೂಳ = ಮೂರ್ಖ; ಚುಕ್ಕೆ = ಕ್ಷುಲ್ಲಕ ಮನುಷ್ಯ, ತಪ್ಪುಗಾರ.

ಲಿಂಗಧಾರಣ.

೨೮. ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಳೇ ಎನ್ನ ಭವಂ ನಾಸ್ತಿಯಾಯಿತ್ತು. ಎನ್ನ ತನ್ನಂತೆ ಮಾಡಿದ. ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿದನು ನೋಡಾ! ತನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನೆನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಸರ್ವಾಂಗದೊಳಹೊರಗೆ ತೆರಹಿಲ್ಲದಳವಡಿಸಿದ ನಮ್ಮ ಶ್ರೀಗುರುಲಿಂಗದೇವ ಚನ್ನಮಲ್ಲಿಕಾರ್ಜುನ.

ತೆರಹು = ಸ್ಥಳ; ಅಳವಡಿಸು = ಜೊತೆಗೊಳಿಸು.

೨೯. ಸಂಸಾರ ಸಾಗರದೊಳಗೆ ಬಿದ್ದೆ ನೋಡಾ ನಾನು. ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು ಅಂಗವಿಕಾರದ ಸಂಗವ ನಿಲಿಸಿ ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು. ಹಿಂದಣ ಜನ್ಮವ ತೊಡೆದು ಮುಂದಣ ಪಥವ ತೋರಿದನೆನ್ನ ತಂದೆ. ಚನ್ನಮಲ್ಲಿಕಾರ್ಜುನನ ನಿಜವನರುಹಿದನೆನ್ನ ಗುರು.

ತೊಡೆ = ಒರಸು, ಅಳುಕಿಸು; ಪಥ = ದಾರಿ.

೩೦. ಅಂಗದಲ್ಲಿ ಆಚಾರವ ತೋರಿದ. ಆ ಆಚಾರವೇ ಲಿಂಗವೆಂದರುಹಿದ. ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ. ಆ ಅರಿವೇ ಜಂಗಮವೆಂದು ತೋರಿದ. ಚನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನಬಸವಣ್ಣನು ಎನಗೀ ಕ್ರಮವನರುಹಿದನಯ್ಯ.

ಅರುಹು = ತಿಳಿಸು; ನೆಲೆಗೊಳಿಸು = ಸ್ಥಾಪಿಸು.

೩೧. ಅಯ್ಯಾ ಪಾತಾಳವಿತ್ತಿತ್ತ, ಶ್ರೀಪಾದವತ್ತತ್ತ. ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ. ಅಯ್ಯ ದಶದಿಕ್ಕು ಇತ್ತಿತ್ತ, ದಶಭುಜಗಳತ್ತತ್ತ. ಚನ್ನಮಲ್ಲಿಕಾರ್ಜುನಯ್ಯ ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

ಮುಕುಟ = ಕಿರೀಟ; ಚುಳುಕ = ಸೂಕ್ಷ್ಮ, ಸಣ್ಣ.

ಸತಿಪತಿ ಭಾವದ ವಚನಗಳು.

೩೨. ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು, ಚನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು.

ತಪಸಿದ್ದೆ = ತಪಸ್ಸು ಮಾಡಿದ್ದೆ; ಹಸೆ = ಆಸನ, ಲಗ್ನಕ್ಕಾಗಿ ಶೃಂಗರಿಸಿದ ಸ್ಥಳ; ಬೆಸಗೊಳ್ಳು = ಪ್ರಶ್ನೆಮಾಡು; ಶಶಿಧರ = ಶಿವ.

೩೩. ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ, ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

ಸೇಸೆ = ಲಗ್ನದಲ್ಲಿ ಒಗೆಯುವ ಅಕ್ಕಿಕಾಳು.

೩೪. ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ, ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದೂ ಬಡದ ಬಾಳುವೆಗೆ ಕೊಟ್ಟರೆನ್ನ. ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಆಲಿಕಲ್ಲು = ಅಣೇಕಲ್ಲು; ಚಪ್ಪರ = ಹಂದರ.

೩೫. ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ, ಆನು ಮದುವಳಿಗೆಯಾದನು. ವಸುಧೆಯ ಭಕ್ತರಿಲ್ಲರು ನಿಬ್ಬಣಿಗರಾದರು. ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ.

ತೆತ್ತಿಗ = ಹಿತಸ್ತ, ಮಿತ್ರ; ಮದುವಣಿಗ = ಮದುಮಗ; ವಸುಧೆ = ಭೂಮಿ; ಸಾದೃಶ್ಯ = ತನಗೆ ತಕ್ಕ.

೩೬. ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳುಗುಂದದರಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೇ ಅನುಲೇಪನವೆನಗೆ, ರುದ್ರಾಕ್ಷಿಯೇ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ, ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಆನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ. ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

ಒಳುಗುಂದದ = ಸೌಂದರ್ಯವು ಹೋಗದ; ಅಂಬರ = ಅರಿವೆ; ರೇಣು = ಧೂಳಿ; ಅನುಲೇಪನ = ಮೈಗೆ ಹಚ್ಚುವ ಮಿಶ್ರಣ; ಮೈದೊಡಿಗೆ = ಶರೀರದ ಆಭರಣ; ತೊಂಡಿಲ = ತಲೆಯ ಮೇಲೆ ಸುತ್ತುವ ಮುತ್ತಿನ ಮಾಲೆ.

೩೭. ಅತ್ತೆ ಮಾಯೆ, ಮಾವ ಸಂಸಾರಿ, ಮೂವ್ವರು ಮೈದುನರು ಹುಲಿಯಂತವರು, ನಲ್ಲನ ನಗೆವೆಣ್ಣು ಕೆಳದಿಯರ ಭಾವದಲಿರವನು. ಇವ ದೇವನಲ್ಲ. ಅತ್ತಿಗೆಯರ ಮೀರಲಾರೆನು. ತೊತ್ತುವಿನ

6787

ಕಾವಲು. ಹೇಳುವರಿ ಕೇಳು. ಕರ್ಮವೆಂಬ ಗಂಡನ ಬಾಯ ಟೊಣೆದು, ಹಾದರವನಾಡುವೆನು ಹರನ ಕೂಡೆ. ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ. ಕರಚೆಲ್ವ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸಜ್ಜನ ಗಂಡನ ಮಾಡಿಕೊಂಬೆ.

ನಗೆವೆಣ್ಣು = ನಗುವ ಹೆಂಗಸು; ಕೆಳದಿ = ಗೆಳತಿ; ಟೊಣೆ = ಸುಳ್ಳು ಹೇಳು, ಠಕ್ಕಿಸು; ಅನುಭಾವ = ಜ್ಞಾನ; ಕರ = ಅತ್ಯಂತ.

೩೮. ಎನ್ನಂತೆ ಪುಣ್ಯಗೈದವರುಂಟೆ? ಎನ್ನಂತೆ ಭಾಗ್ಯಗೆಯ್ದವರುಂಟೆ? ಕಿನ್ನರನಂತಪ್ಪ ಸಹೋದರರೆನಗೆ. ಏಳೇಳು ಜನ್ಮದಲಿ ಶಿವಭಕ್ತರೇ ಬಂಧುಗಳೆನಗೆ. ಚನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ.

ಗೈದವರು = ಮಾಡಿದವರು; ಕಿನ್ನರ = ಕಿನ್ನರಿಬ್ರಹ್ಮಯ್ಯನೆಂಬ ಶಿವಶರಣ.

ಗುರುವಿನ ಮಹತ್ವ.

೩೯. ಒಳಗೆ ಶೋಧಿಸಿ ಹೊರಗೆ ಶುದ್ಧವಿಸಿ, ಒಳಹೊರಗೆಂಬ ಉಭಯ ಶಂಕೆಯ ಕಳೆದು, ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ, ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ, ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ, ನಿಜೋಪದೇಶವನಿತ್ತು, ಆ ಶಿಷ್ಯನ ನಿಜದಾದಿಯನ್ನೈದಿಸುವನೀಗ ಜ್ಞಾನಗುರು. ಆ ಸಹಜ ಗುರುವೀಗ ಜಗದಾರಾಧ್ಯರು. ಅವರ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚನ್ನಮಲ್ಲಿಕಾರ್ಜುನಾ.

ಶಲಾಕೆ = ಸಳಿ; ತಳವೆಳಗು = ಪ್ರಕಾಶ; ಸುಕ್ಷೇತ್ರ = ಹಸನಾದ ಹೊಲ; ಐದಿಸು = ಮುಟ್ಟಿಸು; ನಿವತ್ತಿ = ದೂರಾದ ಸ್ಥಿತಿ.

೪೦. ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ, ಭವಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೇ, ಭವಿ ಎಂಬುದ ತೊಡೆದು ಭಕ್ತ ಎಂದೆನಿಸಿದ ಗುರುವೇ, ಚನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು.

ತೊಡೆ = ಒರಸು.

೪೧. ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು. ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತು. ಜಯ ಜಯ ಗುರುವೇ, ನಮೋ ಪರಮ ಗುರುವೇ, ನಮೋ ನಮೋ, ಚನ್ನಮಲ್ಲಿಕಾರ್ಜುನನ ತಂದೆನಗೆ ತೋರಿಕೊಟ್ಟ ಗುರುವೇ, ನಮೋ ನಮೋ.

೪೨. ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ. ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ. ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ. ಚನ್ನಮಲ್ಲಿಕಾರ್ಜುನಯ್ಯಾ ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ ಸದ್ಗುರು ಸ್ವಾಮಿ ಲಿಂಗಸ್ವಾಯತ ಮಾಡಿದನಾಗಿ ಧನ್ಯಳಾದೆನು.

ಗೋಷ್ಠಿ = ಮಾತು, ಸಹವಾಸ, ಸ್ವಾಯತ = ಒಳಕೊಳ್ಳುವ ಸ್ಥಿತಿ.

ವಿಭೂತಿ ಮಹಾತ್ಮ್ಯೆ.

೪೩. ಹಿತವಿದೆ. ಸಕಲ ಲೋಕದ ಜನಕ್ಕೆ ಮತವಿದೆ. ಶ್ರುತಿ ಪುರಾಣದ ಗತಿ ಇದೆ. ಭಕುತಿಯ ಬೆಳಗಿನುನ್ನತಿ ಇದೆ. ಶ್ರೀ ವಿಭೂತಿಯನೊಲಿದು ಧರಿಸಿರೇ. ಭವವನು ಪರಿವುದು, ದುರಿತ ಸಂಕುಳವ ನೊರಿಸುವುದು, ಹರನ ಸಾಲೋಕ್ಯ, ಸಾಮೀಪ್ಯದಲ್ಲಿರಿಸುವುದು. ನಿರುತವಿದನೇ ನಂಬು ಮನಜಾ. ಜವನ ಭೀತಿ, ಮರಣಭಯದಿಂದ

ಈ ವಿಭೂತಿಯ ಅಗಸ್ತ್ಯ, ಕಶ್ಯಪ, ಜಮದಗ್ನಿಗಳು ಧರಿಸುವರು ನೋಡಾ ಶ್ರೀಶೈಲ ಚನ್ನಮಲ್ಲಿಕಾರ್ಜುನನೊಲಿಸುವ ಶ್ರೀ ವಿಭೂತಿ.

ಮತ = ಒಪ್ಪಿಗೆ; ಗತಿ = ಪರಿಣಾಮ.; ಬೆಳಗು = ಪ್ರಕಾಶ, ಪರಿ = ಹರಿ; ದುರಿತ = ಪಾಪ; ಸಂಕುಳ = ಗುಂಪು; ನಿರುತ = ನಿಶ್ಚಯವಾಗಿ; ಜವ = ಯಮ.

ಮಂತ್ರ ಮಹಾತ್ಮ್ಯೆ.

೪೪. ಒಪ್ಪುವ ಶ್ರೀ ವಿಭೂತಿಯ ನೊಸಲಲ್ಲಿ. ಧರಿಸಿ, ದೃಷ್ಟಿಯಾರೆ ನಿಮ್ಮ ನೋಡಲೊಡನೆ ಬೆಟ್ಟದಷ್ಟು ತಪ್ಪಿಳ್ಳೊಡೆ ಮುಟ್ಟಲಮ್ಮವು ನೋಡಾ! ದುರಿತವ ಪರಿಹರಿಸಬಲ್ಲಡೆ, ಓಂ ನಮಃಶಿವಾಯ ಶರಣೆಂಬುದೇ ಮಂತ್ರ, ನಮಃ ಶಿವಾಯ ಎಂಬುದೇ ಮಂತ್ರ. “ ಯಃ ಕರೋತಿ ತ್ರಿಪುಂಡ್ರಕಂ । ಸಮಸ್ತಜನ್ಮಕೃತಂ ಪಾಪಂ ತತ್‌ಕ್ಷಣಾದೇವ ವಿನಶ್ಯತಿ ॥ ” ಎಂದುದಾಗಿ, ಸಿಂಹದ ಮರಿಯ ಸಿಳ್ನಾಯಿ ತಿಂಬರೆ, ಭಂಗವಿನ್ನಾರದು ಚನ್ನಮಲ್ಲಿಕಾರ್ಜುನಾ ?

ನೊಸಲು = ಹಣೆ; ದೃಷ್ಟಿಯಾರೆ = ಕಣ್ಣು ತುಂಬ; ಮುಟ್ಟಲಮ್ಮವು = ಮುಟ್ಟಲಾರವು; ಸೀಳ್ನಾಯಿ = ಕ್ಷುದ್ರನಾಯಿ; ಭಂಗ = ಅಪಮಾನ.

೪೫. ಏಳು ಕೋಟಿ ಮಹಾಮಂತ್ರ. ಉಪಮಂತ್ರಂಗಳಿಗೆ ಲೆಕ್ಕವಿಲ್ಲ. ಚಿತ್ತವ್ಯಾಕುಳನಾಗಿ ಭ್ರಮಿಸದಿರಾ. ಎಲೆ ಮನವೇ ‘ ಶಿವ ಶಿವಾ ’ ಎಂದರೆ ಸಾಲದೇ ? ಅದೆಂತೆಂದೊಡೆ, ‘ ಶಿವೇತಿ ಮಂಗಳಂ ನಾಮ । ಯಸ್ಯ ವಾಚ್ಯಂ ಪ್ರವರ್ತತೇ । ಭಸ್ಮೀಭವಂತು ತಸ್ಯ ತ । ಮಹಾಪಾತಕ ಕೋಟಯಃ । ’ ಎಂಬುದಾಗಿ ಎನಗಿದೇ ತಂತ್ರ, ಎನಗಿದೇ ಮಂತ್ರ, ಎನಗಿದೇ ಗತಿ ಮತಿ ಚೈತನ್ಯವಯ್ಯಾ. ಸದ್ಗುರು ಚನ್ನಮಲ್ಲಿಕಾರ್ಜುನ ತೋರಿದ ಎನಗಿದೇ ಸಹಜ ಮಂತ್ರ.

ವ್ಯಾಕುಳ = ಚಿಂತೆಯಿಂದ ತುಂಬಿದ

ಭಕ್ತಸ್ಥಲ.

ಸದಾಚಾರದಿಂದಿರುವುದು.

೪೬. ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ! ಇಂತಿಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ. ವಿವಾಹವ ಮಾಡಿದಿರಿ. ಸಯವಪ್ಪ ಗಂಡಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗತನವ ಮಾಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮಂಡೆಗೆ ಹುವ್ವ ತಾಹೆನಲ್ಲದೆ, ಹುಲ್ಲ ತಾರೆನು. ಅವಧರಿಸಿ ನಿಮ್ಮಡಿಗಳೆಲ್ಲರು. ಮರಳಿ ಬಿಜಯಂಗೈವುದು ಶರಣಾರ್ಥಿ.

ಅಸಂಖ್ಯಾತರು = ಶಿವಶರಣರು; ಸಯ = ಯೋಗ್ಯ; ಒಗತನ = ಬಾಳುವೆ; ಮಂಡೆ = ತಲೆ; ಅವಧರಿಸು = ಲಕ್ಷವಿಟ್ಟು ಕೇಳಿರಿ.

೪೭. ಅಯ್ಯಾ ಸದಾಚಾರ, ಸದ್ಭಕ್ತಿ, ಸತ್ಕ್ರಿಯೆ, ಸಮ್ಯಜ್ಞಾನ, ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ, ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಿಭಕ್ತಭೇದ, ಸತ್ಪಾತ್ರ ದ್ರವ್ಯಾರ್ಪಣ, ಗೌರವ ಬುದ್ಧಿ, ಲಿಂಗಲೀಯ, ಜಂಗಮಾನುಭಾವ, ದಶವಿಧ ಪಾದೋದಕ, ಏಕಾದಶ ಪ್ರಸಾದ, ಷೋಡಶಭಕ್ತಿ ನಿರ್ವಾಹ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಚನೆ, ತ್ರಿವಿಧ ಷಡ್ವಿಧ ನವವಿಧಜಪ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಿತ, ಚಿದ್ವಿಭೂತಿ ಸ್ನಾನ ಧೂಳನ ಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿಧಾರಣ, ತಾ ಮಾಡುವ ಸತ್ಯ ಕಾಯಕ, ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟುಕೊಂಬುವ ಭೇದ, ತಾನಾಚರಿಸುವ ಸತ್ಯ ನಡೆನುಡಿ, ತಾ ನಿಂದ ನಿರ್ವಾಣಪದ, ಇಂತೀ ಮೂವತ್ತೆರಡು ಕಲೆಗಳ ಸದ್ಗುರು ಮುಖದಿಂದರಿದ ಬಸವ ಮೊದಲಾದ ಸಮಸ್ತ ಪ್ರಮಥಗಣಂಗಳೆಲ್ಲ ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾ

ತೊಡೆ = ಒರಿಸು, ಅಳುಕಿಸು; ಪಥ = ದಾರಿ.

೩೦. ಅಂಗದಲ್ಲಿ ಆಚಾರವ ತೋರಿದ. ಆ ಆಚಾರವೇ ಲಿಂಗವೆಂದರುಹಿದ. ಪ್ರಾಣದಲ್ಲಿ ಅರಿತ ನೆಲೆಗೊಳಿಸಿದ. ಆ ಅರಿವೇ ಜಂಗಮವೆಂದು ತೋರಿದ. ಚನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನ ಬಸವಣ್ಣನು ಎನಗೀ ಕ್ರಮವನರುಹಿದನಯ್ಯ.

ಅರುಹು = ತಿಳಿಸು; ನೆಲೆಗೊಳಿಸು = ಸ್ಥಾಪಿಸು.

೩೧. ಅಯ್ಯಾ ಪಾತಾಳವಿತ್ತತ್ತ, ಶ್ರೀಪಾದವತ್ತತ್ತ. ಬ್ರಹ್ಮಾಂಡವಿತ್ತತ್ತ, ಮಣಿಮುಕುಟವತ್ತತ್ತ. ಅಯ್ಯ ದಶದಿಕ್ಕು ಇತ್ತತ್ತ, ದಶಭುಜಗಳತ್ತತ್ತ. ಚನ್ನಮಲ್ಲಿಕಾರ್ಜುನಯ್ಯ ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

ಮುಕುಟ = ಕಿರೀಟ; ಚುಳುಕ = ಸೂಕ್ಷ್ಮ, ಸಣ್ಣ.

ಸತಿಪತಿ ಭಾವದ ವಚನಗಳು.

೩೨. ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು, ಚನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು.

ತಪಸಿದ್ದೆ = ತಪಸ್ಸ ಮಾಡಿದ್ದೆ; ಹಸೆ = ಆಸನ, ಲಗ್ನಕ್ಕಾಗಿ ಶೃಂಗರಿಸಿದ ಸ್ಥಳ; ಬೆಸಗೊಳ್ಳು = ಪ್ರಶ್ನಮಾಡು; ಶಶಿಧರ = ಶಿವ.

೩೩. ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ, ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

ಸೇಸೆ = ಲಗ್ನದಲ್ಲಿ ಒಗೆಯುವ ಅಕ್ಕೀಕಾಳು.

೩೪. ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ, ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ. ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಆಲಿಕಲ್ಲು = ಆಣೇಕಲ್ಲು; ಚಪ್ಪರ = ಹಂದರ.

೩೫. ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ, ಆನು ಮದುವಳಿಗೆಯಾದನು. ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು. ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ.

ತೆತ್ತಿಗ = ಹಿತಸ್ಥ, ಮಿತ್ರ; ಮದುವಣಿಗ = ಮದುಮಗ; ವಸುಧೆ = ಭೂಮಿ; ಸಾದೃಶ್ಯ = ತನಗೆ ತಕ್ಕ.

೩೬. ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳುಗುಂದದರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೇ ಅನುಲೇಪನವೆನಗೆ, ರುದ್ರಾಕ್ಷಿಯೇ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ, ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಆನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ. ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

ಒಳುಗುಂದದ = ಸೌಂದರ್ಯವು ಹೋಗದ; ಅಂಬರ = ಅರಿವೆ; ರೇಣು = ಧೂಳು; ಅನುಲೇಪನ = ಮೈಗೆ ಹಚ್ಚುವ ಮಿಶ್ರಣ; ಮೈದೊಡಿಗೆ = ಶರೀರದ ಆಭರಣ; ತೊಂಡಿಲ = ತಲೆಯ ಮೇಲೆ ಸುತ್ತುವ ಮುತ್ತಿನ ಮಾಲೆ.

೩೭. ಅತ್ತೆ ಮಾಯೆ, ಮಾವ ಸಂಸಾರಿ, ಮೂವ್ವರು ಮೈದುನರು ಹುಲಿಯಂತವರು, ನಲ್ಲನು ನಗೆವೆಣ್ಣ ಕೆಳದಿಯರ ಭಾವದಲಿರುವನು. ಇವ ದೇವನಲ್ಲ. ಅತ್ತಿಗೆಯರ ಮೀರಲಾರೆನು. ತೊತ್ತುವಿನ

ಕಾವಲು. ಹೇಳುವರಿ ಕೇಳು. ಕರ್ಮವೆಂಬ ಗಂಡನ ಬಾಯ ಟೊಣೆದು, ಹಾದರವನಾಡುವೆನು ಹರನ ಕೂಡೆ. ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ. ಕರಚೆಲ್ವ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸಜ್ಜನ ಗಂಡನ ಮಾಡಿಕೊಂಬೆ.

ನಗೆವೆಣ್ಣ = ನಗುವ ಹೆಂಗಸು; ಕೆಳದಿ = ಗೆಳತಿ; ಟೊಣೆ = ಸುಳ್ಳು ಹೇಳು, ಠಕ್ಕಿಸು; ಅನುಭಾವ = ಜ್ಞಾನ; ಕರ = ಅತ್ಯಂತ.

೩೮. ಎನ್ನಂತೆ ಪುಣ್ಯಗೈದವರುಂಟೆ? ಎನ್ನಂತೆ ಭಾಗ್ಯಗೆಯ್ದವರುಂಟೆ? ಕಿನ್ನರನಂತಪ್ಪ ಸಹೋದರರೆನಗೆ. ಏಳೇಳು ಜನ್ಮದಲಿ ಶಿವಭಕ್ತರೇ ಬಂಧುಗಳೆನಗೆ. ಚನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ.

ಗೈದವರು = ಮಾಡದವರು; ಕಿನ್ನರ = ಕಿನ್ನರೀಬ್ರಹ್ಮಯ್ಯನೆಂಬ ಶಿವಶರಣ.

ಗುರುವಿನ ಮಹತ್ವ.

೩೯. ಒಳಗೆ ಶೋಧಿಸಿ ಹೊರಗೆ ಶುದ್ಧವಿಸಿ, ಒಳಹೊರಗೆಂಬ ಉಭಯ ಶಂಕೆಯ ಕಳೆದು, ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ, ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ, ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ, ನಿಜೋಪದೇಶವನಿತ್ತು, ಆ ಶಿಷ್ಯನ ನಿಜದಾದಿಯನೈದಿಸುವನೀಗ ಜ್ಞಾನಗುರು. ಆ ಸಹಜ ಗುರುವೀಗ ಜಗದಾರಾಧ್ಯರು. ಅವರ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚನ್ನಮಲ್ಲಿಕಾರ್ಜುನಾ.

ಶಲಾಕೆ = ಸಳಿ; ತಳವೆಳಗು = ಪ್ರಕಾಶ; ಸುಕ್ಷೇತ್ರ = ಹಸನಾದ ಹೊಲ; ಐದಿಸು = ಮುಟ್ಟಿಸು; ನಿವೃತ್ತಿ = ದೂರಾದ ಸ್ಥಿತಿ.

೪೦. ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ, ಭವಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೇ, ಭವಿ ಎಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೇ, ಚನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು.

ತೊಡೆ = ಒರಸು.

೪೧. ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು. ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತು. ಜಯ ಜಯ ಗುರುವೇ, ನಮೋ ಪರಮ ಗುರುವೇ, ನಮೋ ನಮೋ, ಚನ್ನಮಲ್ಲಿಕಾರ್ಜುನನ ತಂದೆನಗೆ ತೋರಿಕೊಟ್ಟ ಗುರುವೇ, ನಮೋ ನಮೋ.

೪೨. ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ. ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ. ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ. ಚನ್ನಮಲ್ಲಿಕಾರ್ಜುನಯ್ಯಾ ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ ಸದ್ಗುರು ಸ್ವಾಮಿ ಲಿಂಗಸ್ವಾಯತ ಮಾಡಿದನಾಗಿ ಧನ್ಯಳಾದೆನು.

ಗೋಷ್ಠಿ = ಮಾತು, ಸಹವಾಸ, ಸ್ವಾಯತ = ಒಳಕೊಳ್ಳುವ ಸ್ಥಿತಿ.

ವಿಭೂತಿ ಮಹಾತ್ಮ್ಯೆ.

೪೩. ಹಿತವಿದೆ. ಸಕಲ ಲೋಕದ ಜನಕ್ಕೆ ಮತವಿದೆ. ಶ್ರುತಿ ಪುರಾಣದ ಗತಿ ಇದೆ. ಭಕುತಿಯ ಬೆಳಗಿನುನ್ನತಿ ಇದೆ. ಶ್ರೀ ವಿಭೂತಿಯನೊಲಿದು ಧರಿಸಿರೇ. ಭವವನು ಪರಿವುದು, ದುರಿತ ಸಂಕುಳವ ನೂರಿಸುವುದು, ಹರನ ಸಾಲೋಕ್ಯ, ಸಾಮೀಪ್ಯದಲ್ಲಿರಿಸುವುದು. ನಿರುತವಿದನೇ ನಂಬು ಮನುಜಾ. ಜವನ ಭೀತಿ, ಮರಣಭಯದಿಂದ

ಈ ವಿಭೂತಿಯ ಅಗಸ್ತ್ಯ, ಕಶ್ಯಪ, ಜಮದಗ್ನಿಗಳು ಧರಿಸುವರು ನೋಡಾ ಶ್ರೀಶೈಲ ಚನ್ನಮಲ್ಲಿಕಾರ್ಜುನನೊಲಿಸುವ ಶ್ರೀ ವಿಭೂತಿ.

ಮತ = ಒಪ್ಪಿಗೆ; ಗತಿ = ಪರಿಣಾಮ; ಬೆಳಗು = ಪ್ರಕಾಶ, ಪರಿ = ಹರಿ; ದುರಿತ = ಪಾಪ; ಸಂಕುಳ = ಗುಂಪು; ನಿರುತ = ನಿಶ್ಚಯವಾಗಿ; ಜವ = ಯಮ.

ಮಂತ್ರ ಮಹಾತ್ಮ್ಯೆ.

೪೪. ಒಪ್ಪುವ ಶ್ರೀ ವಿಭೂತಿಯ ನೊಸಲಲ್ಲಿ ಧರಿಸಿ, ದೃಷ್ಟಿಯಾರೆ ನಿಮ್ಮ ನೋಡಲೊಡನೆ ಬೆಟ್ಟದಷ್ಟು ತಪ್ಪುಳ್ಳೊಡೆ ಮುಟ್ಟಲಮ್ಮವು ನೋಡಾ! ದುರಿತವ ಪರಿಹರಿಸಬಲ್ಲಡೆ, ಓಂ ನಮಃಶಿವಾಯ ಶರಣೆಂಬುದೇ ಮಂತ್ರ, ನಮಃ ಶಿವಾಯ ಎಂಬುದೇ ಮಂತ್ರ. "ಯಃ ಕರೋತಿ ತ್ರಿಪುಂಡ್ರಕಂ। ಸಮಸ್ತಜನ್ಮಕೃತಂ ಪಾಪಂ ತತ್ಕ್ಷಣಾದೇವ ವಿನಶ್ಯತಿ ॥" ಎಂದುದಾಗಿ, ಸಿಂಹದ ಮರಿಯ ಸಿಳ್ನಾಯಿ ತಿಂಬರೆ, ಭಂಗವಿನ್ನಾರದು ಚನ್ನಮಲ್ಲಿಕಾರ್ಜುನಾ ?

ನೊಸಲು = ಹಣೆ; ದೃಷ್ಟಿಯಾರೆ = ಕಣ್ಣು ತುಂಬ; ಮುಟ್ಟಲಮ್ಮವು = ಮುಟ್ಟಲಾರವು; ಸೀಳ್ನಾಯಿ = ಕ್ಷುದ್ರನಾಯಿ; ಭಂಗ = ಅಪಮಾನ.

೪೫. ಏಳು ಕೋಟಿ ಮಹಾಮಂತ್ರ. ಉಪಮಂತ್ರಂಗಳಿಗೆ ಲೆಕ್ಕವಿಲ್ಲ. ಚಿತ್ತವ್ಯಾಕುಳನಾಗಿ ಭ್ರಮಿಸದಿರಾ. ಎಲೆ ಮನವೇ 'ಶಿವ ಶಿವಾ' ಎಂದರೆ ಸಾಲದೇ ? ಅಂದೆಂತೆಂದೊಡೆ, 'ಶಿವೇತಿ ಮಂಗಳಂ ನಾಮ। ಯಸ್ಯ ವಾಚ್ಯಂ ಪ್ರವರ್ತತೇ। ಭಸ್ಮೀಭವಂತು ತಸ್ಯ ತ। ಮಹಾಪಾತಕ ಕೋಟಯಃ।' ಎಂಬುದಾಗಿ ಎನಗಿದೇ ತಂತ್ರ, ಎನಗಿದೇ ಮಂತ್ರ, ಎನಗಿದೇ ಗತಿ ಮತಿ ಚೈತನ್ಯವಯ್ಯಾ. ಸದ್ಗುರು ಚನ್ನಮಲ್ಲಿಕಾರ್ಜುನ ತೋರಿದ ಎನಗಿದೇ ಸಹಜ ಮಂತ್ರ.

ವ್ಯಾಕುಳ = ಚಿಂತೆಯಿಂದ ತುಂಬಿದ

ಭಕ್ತಸ್ಥಲ.

ಸದಾಚಾರದಿಂದಿರುವುದು.

೪೬. ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ! ಇಂತಿಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ. ವಿವಾಹವ ಮಾಡಿದಿರಿ. ಸಯವಪ್ಪ ಗಂಡಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗತನವ ಮಾಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮಂಡೆಗೆ ಹೂವ ತಾಹೆನಲ್ಲದೆ, ಹುಲ್ಲ ತಾರೆನು. ಅವಧರಿಸಿ ನಿಮ್ಮಡಿಗಳೆಲ್ಲರು. ಮರಳಿ ಬಿಜಯಂಗೈವುದು ಶರಣಾರ್ಥಿ.

ಅಸಂಖ್ಯಾತರು = ಶಿವಶರಣರು; ಸಯ = ಯೋಗ್ಯ; ಒಗತನ = ಬಾಳುವೆ; ಮಂಡೆ = ತಲೆ; ಅವಧರಿಸು = ಲಕ್ಷವಿಟ್ಟು ಕೇಳಿರಿ.

೪೭. ಅಯ್ಯಾ ಸದಾಚಾರ, ಸದ್ಭಕ್ತಿ, ಸತ್ಕ್ರಿಯೆ, ಸಮ್ಯಜ್ಞಾನ, ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ, ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಿಭಕ್ತಭೇದ, ಸತ್ಪಾತ್ರ ದ್ರವ್ಯಾರ್ಪಣ, ಗೌರವ ಬುದ್ಧಿ, ಲಿಂಗಲೀಯ, ಜಂಗಮಾನುಭಾವ, ದಶವಿಧ ಪಾದೋದಕ, ಏಕಾದಶ ಪ್ರಸಾದ, ಷೋಡಶಭಕ್ತಿ ನಿರ್ವಾಹ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಚನೆ. ತ್ರಿವಿಧ ಷಡ್ವಿಧ ನವವಿಧಜಪ, ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಿತ, ಚಿದ್ವಿಭೂತಿ ಸ್ನಾನ ಧೂಳನ ಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿಧಾರಣ, ತಾ ಮಾಡುವ ಸತ್ಯ ಕಾಯಕ, ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟುಕೊಂಬುವ ಭೇದ, ತಾನಾಚರಿಸುವ ಸತ್ಯ ನಡೆನುಡಿ, ತಾ ನಿಂದ ನಿರ್ವಾಣಪದ, ಇಂತೀ ಮೂವತ್ತೆರಡು ಕಲೆಗಳ ಸದ್ಗುರು ಮುಖದಿಂದರಿದ ಬಸವ ಮೊದಲಾದ ಸಮಸ್ತ ಪ್ರಮಥಗಣಂಗಳೆಲ್ಲ ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾ

ಚರಿಸಿವರು ನೋಡಾ. ಇಂತು ಪ್ರಮಥಗಣಂಗಳಾಚರಿಸಿದ ಸತ್ಯ ಸನ್ಮಾರ್ಗವನರಿಯದ ಮೂಢ ಅಧಮರನೆಂತು ಶಿವಶಕ್ತಿ ಶಿವಭಕ್ತಿ ಶಿವಜಂಗಮವೆಂಬೆನಯ್ಯ ಚನ್ನಮಲ್ಲಿಕಾರ್ಜುನಾ?

೪೮. ಗುಣದೋಷ ಸಂಪಾದನೆಯ ಮಾಡುವನ್ನಕ್ಕರ, ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ, ಮೋಹದ ಮಂದಿರ, ಮದದಾವರಣ, ಮತ್ಸರದ ಹೊದಿಕೆ. ಆ ಭವವರತಲ್ಲದೆ, ಚನ್ನಮಲ್ಲಿಕಾರ್ಜುನನರಿವುದಕ್ಕೆ ಇಂಬಿಲ್ಲ ಕಾಣಿರಣ್ಣ.

ಒಡಲು = ಶರೀರ; ಗೊತ್ತು = ಸ್ಥಳ; ಇಕ್ಕೆ = ಸ್ಥಳ, ಮನೆ; ಆವರಣ = ಹೊದಿಕೆ; ಅರತಲ್ಲದೆ = ನಾಶವಾದ ಹೊರತು; ಇಂಬಿಲ್ಲ = ಸ್ಥಳವಿಲ್ಲ.

೪೯. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ! ಸಮುದ್ರದ ತಡೆಯಲ್ಲಿ ಮನೆಯ ಮಾಡಿ, ನೊರೆ ತೆರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ! ಮಲ್ಲಿಕಾರ್ಜುನದೇವ ಕೇಳಯ್ಯ! ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ, ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ತಡೆ = ದಂಡೆ.

೫೦. ಸಟೆದಿಟವೆಂಬುವೆರಡುವಿಡಿದು ನಡೆವುದೀ ಲೋಕವೆಲ್ಲವು. ಸಟೆದಿಟವೆಂಬುವೆರಡುವಿಡಿದು ನಡೆವ ಲೋಕದೊಡನೆ ಶರಣನು. ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದೊಡೆ ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ, ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ. ಹುಸಿ ಎಂಬುದೇ ಹೊಲೆ. ಶಿವಭಕ್ತಂಗೆ ಹುಸಿ ಎಂಬುದುಂಟೇ ಅಯ್ಯಾ? ಹುಸಿಯನಾಡಿ | ಲಿಂಗವ ಪೂಜಿಸಿದಡೆ, ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ ಚನ್ನಮಲ್ಲಿಕಾರ್ಜುನಾ.

ಕಿಲ್ಬಿಷ = ಹೊಲಸು; ಅಡಗು = ಮಾಂಸ; ಹೊಳ್ಳು = ಜೊಳ್ಳು, ಪೊಳ್ಳಾದದ್ದು.

೫೦. ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ, ಅದಕ್ಕೆ ಮರುಗುವಂತೆ ಅವಕೇಕೆ ಮರುಗನು? ಅದೆಂತೆಂದೊಡೆ, 'ಸ್ವಾತ್ಮನಾಮಿತರಶ್ಚೈವ ದೃಷ್ಟ್ವಾ ನಿತ್ಯಾದಿಭಿನ್ನತೆ। ಸರ್ವಂ ಚಿಜ್ಜ್ಯೋತಿ ರೇವೇತಿ ಯಃ ಪಶ್ಯತಿ ಸ ಪಶ್ಯತಿ॥' ಎಂದುದಾಗಿ ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತ ನಾಗಿದ್ದು ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?

ಜಾಲಗಾರ = ಮೀನ ಹಿಡಿಯುವವ; ನಲಿ = ಆನಂದಪಡು.

೫೧. ಸಜ್ಜನನಾಗಿ ಮಜ್ಜನಕ್ಕೆರೆವೆ. ಶಾಂತನಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಚ್ಚ ಹಾಡುವೆ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

ಸಮರತಿ = ಕೂಡಿದ ಪ್ರೇಮ.

೫೨. ತನು ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರುತಿಯನೊಲ್ಲೆಯಯ್ಯ ನೀನು. ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚನ್ನಮಲ್ಲಿಕಾರ್ಜುನಯ್ಯ?

ಹದುಳಿಗ = ಸುಖವುಳ್ಳವ, ಯೋಗ್ಯ ವರ್ತನೆಯುಳ್ಳವ; ಪರಿಣಾಮಿ = ಲಿಂಗಾನಂದವುಳ್ಳವ.

ಚರಿಸಿವರು ನೋಡಾ. ಇಂತು ಪ್ರಮಥಗಣಂಗಳಾಚರಿಸಿದ ಸತ್ಯ ಸನ್ಮಾರ್ಗವನರಿಯದ ಮೂಢ ಅಧಮರನೆಂತು ಶಿವಶಕ್ತಿ ಶಿವಭಕ್ತಿ ಶಿವಜಂಗಮವೆಂಬೆನಯ್ಯ ಚನ್ನಮಲ್ಲಿಕಾರ್ಜುನಾ?

೪೮. ಗುಣದೋಷ ಸಂಪಾದನೆಯ ಮಾಡುವನ್ನಕ್ಕರ, ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ, ಮೋಹದ ಮಂದಿರ, ಮದದಾವರಣ, ಮತ್ಸರದ ಹೊದಿಕೆ. ಆ ಭವವರತಲ್ಲದೆ, ಚನ್ನಮಲ್ಲಿಕಾರ್ಜುನನರಿವುದಕ್ಕೆ ಇಂಬಿಲ್ಲ ಕಾಣಿರಣ್ಣಾ.

ಒಡಲು = ಶರೀರ; ಗೊತ್ತು = ಸ್ಥಳ; ಇಕ್ಕೆ = ಸ್ಥಳ, ಮನೆ; ಆವರಣ = ಹೊದಿಕೆ; ಅರತಲ್ಲದೆ = ನಾಶವಾದ ಹೊರ್ತು; ಇಂಬಿಲ್ಲ = ಸ್ಥಳವಿಲ್ಲ.

೪೯. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ! ಸಮುದ್ರದ ತಡೆಯಲ್ಲಿ ಮನೆಯ ಮಾಡಿ, ನೊರೆ ತೆರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ! ಮಲ್ಲಿಕಾರ್ಜುನದೇವ ಕೇಳಯ್ಯ! ಲೋಕದೊಳಗೆ ಹುಟ್ಟಿದ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ, ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ತಡೆ = ದಂಡೆ.

೫೦. ಸಟೆದಿಟವೆಂಬುವೆರಡುವಿಡಿದು ನಡೆವುದೀ ಲೋಕವೆಲ್ಲವು. ಸಟೆದಿಟವೆಂಬುವೆರಡುವಿಡಿದು ನಡೆವ ಲೋಕದೊಡನೆ ಶರಣನು. ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದೊಡೆ ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ, ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ. ಹುಸಿ ಎಂಬುದೇ ಹೊಲೆ. ಶಿವಭಕ್ತಂಗೆ ಹುಸಿ ಎಂಬುದುಂಟೇ ಅಯ್ಯಾ? ಹುಸಿಯನಾಡಿ। ಲಿಂಗವ ಪೂಜಿಸಿದಡೆ, ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ ಚನ್ನಮಲ್ಲಿಕಾರ್ಜುನಾ.

ಕಿಲ್ಬಿಷ = ಹೊಲಸು; ಅಡಗು = ಮಾಂಸ; ಹೊಳ್ಳು = ಜೊಳ್ಳು, ಪೊಳ್ಳಾದದ್ದು.

೫೦. ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ, ಅದಕ್ಕೆ ಮರುಗುವಂತೆ ಅವರೇಕೆ ಮರುಗರು? ಅದೆಂತೆಂದೊಡೆ, 'ಸ್ವಾತ್ಮನಾಮಿತರಕ್ಷೈವ ದೃಷ್ಟ್ವಾ ನಿತ್ಯಾದಿಭಿನ್ನತೆ। ಸರ್ವಂ ಚಿಜ್ಜ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ॥' ಎಂದುದಾಗಿ ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?

ಜಾಲಗಾರ = ಮೀನ ಹಿಡಿಯುವವ; ನಲಿ = ಆನಂದಪಡು.

೫೧. ಸಜ್ಜನನಾಗಿ ಮಜ್ಜನಕ್ಕೆರೆವೆ. ಶಾಂತನಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಮ್ಮ ಹಾಡುವೆ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

ಸಮರತಿ = ಕೂಡಿದ ಪ್ರೇಮ.

೫೨. ತನು ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು. ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚನ್ನಮಲ್ಲಿಕಾರ್ಜುನಯ್ಯ?

ಹದುಳಿಗ = ಸುಖವುಳ್ಳವ, ಯೋಗ್ಯ ವರ್ತನೆಯುಳ್ಳವ; ಪರಿಣಾಮಿ = ಲಿಂಗಾನಂದವುಳ್ಳವ.

ಪರಮಾತ್ಮನಲ್ಲಿ ವಿಶ್ವಾಸವುಳ್ಳವನಾಗಿರುವುದು.

೫೩. ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು. ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ! ಅಯ್ಯಾ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿರ್ದೊಡೆ ಮಾಣು ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ ನೀ ನೋಡಿದೊಡೆ ನೋಡು. ನೋಡದಿರ್ದೊಡೆ ಮಾಣು. ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ! ಚನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯ.

ಮಾಣು = ಬಿಡು; ಓಲಾಡು = ತಿರುಗಾಡು, ತೂಗಾಡು; ಹಾರೈಸು = ಇಚ್ಛಿಸು.

೫೪. ಅರಲುಗೊಂಡ ಕೆರೆಗೆ ತೂರಿ ಬಂದು ಹಾಯ್ದಂತೆ, ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡು. ಇದೇ ಎನಗೆ ಇಹದ ಸುಖ, ಪರದ ಗತಿ, ನಡೆದು ಬಂದಂತಾಯಿತ್ತೆನಗೆ. ಚನ್ನಮಲ್ಲಿಕಾರ್ಜುನನೆಂಬ ಗುರುಪಾದವ ಕಂಡು ಧನ್ಯಳಾದೆನು.

ಅರಲು = ರಾಡಿ; ತೂರಿ = ಹಳ್ಳ; ಬರಲು = ಒಣಗಿದ್ದು.

೫೫. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೇ ಅಯ್ಯ? ನೀನು ಬಹಿರಂಗ ವ್ಯವಹಾರದೂರಸ್ಥನು ಅಯ್ಯ, ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೇ ಅಯ್ಯ? ನೀನು ವಾಙ್ಮನಾತೀತನು. ಅಯ್ಯ, ಜಪಸ್ತೋತ್ರದಿಂದೊಲಿಸುವೆನೇ ಅಯ್ಯ? ನೀನು ನಾದಾತೀತನು. ಭಾವಜ್ಞಾನದಿಂದೊಲಿಸುವೆನೇ ಅಯ್ಯ? ನೀನು ಮತಿಗತೀತನು. ಹೃದಯಕಮಲದಲ್ಲಿಂಬಿಟ್ಟುಕೊಂಬೆನೇ ಅಯ್ಯ? ನೀನು ಸರ್ವಾಂಗಪರಿಪೂರ್ಣನು. ಅಯ್ಯ ನಿನ್ನ ಒಲಿಸಲೆನ್ನಳವಲ್ಲ. ನೀನೊಲಿವುದೇ ಸುಖವಯ್ಯ ಚನ್ನಮಲ್ಲಿಕಾರ್ಜುನಾ,

ಅತೀತನು = ಮೀರಿದವನು; ಅಳವಲ್ಲ = ಶಕ್ತಿಯಲ್ಲ.

೧೫. ಅಕ್ಕ ಕೇಳವ್ವ, ಅಕ್ಕಯ್ಯ ನಾನೊಂದು ಕನಸ ಕಂಡೆ. ಅಕ್ಕಿಯಡಕೆ ತೆಂಗಿನ ಕಾಯ ಕಂಡೆ. ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕ ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಸುಲಿಪಲ್ಲು = ಸ್ವಚ್ಛವಾದ, ಹೊಳೆಯುವ ಹಲ್ಲು; ಗೊರವ = ಬೇಡ, ಈಶ್ವರ; ಹೋಹನ = ಹೋಗುವವನ; ಬೆಂಬತ್ತಿ = ಬೆನ್ನುಹತ್ತಿ.

೧೬. ಕಾಮ ಬಲ್ಲಿದನೆಂದರೆ, ಉರುಹಿ ಭಸ್ಮವ ಮಾಡಿದ. ಬ್ರಹ್ಮ ಬಲ್ಲಿದನೆಂದರೆ ಶಿರವ ಚಿವುಟಿಯಾಡಿದ. ಎಲೆ ಅವ್ವ, ನೀನು ಕೇಳಾ ತಾಯೆ. ವಿಷ್ಣು ಬಲ್ಲಿದನೆಂದರೆ, ಆಕಳ ಕಾಯ್ದಿರಿಸಿದ. ತ್ರಿಪುರದ ಕೋಟಿ ಬಲ್ಲಿತ್ತೆಂದರೆ ನೊಸಲ ಕಂಗಳ ಉರುಹಿದನವ್ವಾ ! ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ. ಜನನ ಮರಣಕ್ಕೊಳಗಾಗದ ಬಲುಹನೇನ ಬಣ್ಣಿಪೆನವ್ವಾ ?

ಉರುಹು = ಸುಡು; ನೊಸಲು = ಹಣೆ; ಬಲುಹ = ಸಾಮರ್ಥ್ಯ.

೧೭. ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು. ಫಣಿ, ಮಣಿ ಕರ್ಣಕುಂಡಲದವನ ನೋಡವ್ವ! ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವ! ಗೋವಿಂದನ ನಯನ ಉಂಗುಟದ ಮೇಲಿಪ್ಪುದು. ಚನ್ನಮಲ್ಲಿಕಾರ್ಜುನದೇವ, ನಿನ್ನ ಕುರುಹವ್ವಾ!

ಎಳೆ = ಮೃದುವಾದ; ಫಣಿ = ಹಾವು.

೧೮. ಒಳಗಿನ ಗಂಡನವ್ವಾ. ಹೊರಗಿನ ಮಿಂಡನವ್ವಾ. ಎರಡನು ನಡಿಸಲು ಬಾರದಯ್ಯಾ ! ಲೌಕಿಕ ಪಾರಮಾರ್ಥಿಕವೆಂಬೆರಡನು ನಡಿಸಲು ಬಾರದಯ್ಯ. ಚನ್ನಮಲ್ಲಿಕಾರ್ಜುನಯ್ಯಾ, ಬಿಲ್ಲು ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯಾ.

೧೯. ಎನ್ನ ಮನವ ಮಾರುಗೊಂಡನವ್ವಾ ! ಎನ್ನ ತನುವ ಸೂರೆಗೊಂಡನವ್ವಾ ! ಎನ್ನ ಸುಖವನೊಪ್ಪುಗೊಂಡನವ್ವಾ ! ಎನ್ನಿರವ ನಿಂಬುಗೊಂಡನವ್ವಾ ! ಚನ್ನಮಲ್ಲಿಕಾರ್ಜುನನ ಒಲುಮೆಯವಳಾನು.

ಮಾರುಗೊಳ್ಳು = ಬದಲಾಗಿ ತೆಗೆದುಕೊಳ್ಳು; ಒಪ್ಪುಗೊಳ್ಳು = ಒಲಿಯು ; ಇಂಬುಗೊಳ್ಳು = ಸ್ಥಳಕೊಡು; ಇರವು = ಸ್ಥಿತಿ; ಒಲುಮೆ = ಪ್ರೀತಿ.

೨೦. ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚಲುವಂಗಾನೊಲಿದೆನವ್ವ. ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗಾನೊಲಿದೆ ಎಲೆ ಅವ್ವಾ. ನೀನು ಕೇಳಾ ತಾಯೆ. ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು. ಕುಲ ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

ರೂಹು = ರೂಪು, ಆಕೃತಿ; ತೆರಹು = ಸ್ಥಳ; ಎಡೆ = ಸ್ಥಳ.

೨೧. ಮನ ಮನ ತಾರ್ಕಣೆಯ ಕಂಡು ಅನುಭವಿಸಲು, ನೆನಹೇ ಘನವಹುದಲ್ಲದೆ, ಅದು ಹವಣಲ್ಲಿ ನಿಲುವುದೇ ಎಲೇ ಅವ್ವ? ನೀನು ಮರುಳವ್ವೆ. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಗೊಲಿದು, ಸಲೆ ಮಾರುವೋದೆನು. ನಿನ್ನ ತಾಯಿತನವನೊಲ್ಲೆ ಹೋಗೇ

ತಾರ್ಕಣೆ = ಸರಿಯಾಗಿ ಕೂಡುವದು, ಸಂಘಟನೆ; ನೆನಹು = ಧ್ಯಾನ ಹವಣು = ಪ್ರಮಾಣ, ಅಳತೆ; ಮಾರುವೋಗು = ಪ್ರತಿಯಾಗಿ ತೆಗೆದುಕೊಳ್ಳಪಡು.

೨೨. ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನವ ಕೊಳ್ಳಿರವ್ವಾ! ನಮ್ಮ ನಲ್ಲನ ಮೆಯ್ಯ ಹತ್ತುವ ಅರಿಸಿನವ ಕೊಳ್ಳಿರವ್ವಾ! ಒಳುಗುಂದದರಿಸಿನವ ಮಿಂದು ಚನ್ನಮಲ್ಲಿಕಾರ್ಜುನನಪ್ಪಿರವ್ವಾ!

ಒಳುಗುಂದದ = ಸೌಂದರ್ಯ ಹೋಗದ.

೨೩ ನೀನು ದಂಡು ಮಂಡಲಕ್ಕೆ ಹೋದೆನೆಂದೊಡೆ, ನಾನು ಸುಮ್ಮನಿಹೆನು. ನೀನು ಎನ್ನ ಕೈಯೊಳಗಿರ್ದು ಎನ್ನ ಮನದೊಳಗಿರ್ದು

ನುಡಿಯದಿರ್ದೊಡಾನು ಎಂತು ಸೈರಿಸುವೆನಯ್ಯ! ನೇಹವೆಂಬ ಕುಂಟಜ ಚನ್ನಮಲ್ಲಿಕಾರ್ಜುನನೊಲಿಸದಿದ್ದರೆ, ಇನ್ನೇವೆ ಸಖಿಯೇ?

ದಂಡುಮಂಡಲ = ಯುದ್ಧಭೂಮಿ; ನೇಹ = ಪ್ರೀತಿ; ಇನ್ನೇವೆ = ಇನ್ನೇನು ಮಾಡಲಿ.

೭೪. ಎರದ ಮುಳ್ಳಿನಂತೆ ಪರಗಂಡರೆನಗವ್ವ. ಸೋಂಕಲಮ್ಮೆ ಸುಳಿಯಲಮ್ಮೆ, ನಂಬಿ ನಚ್ಚಿ ಮಾತಾಡಲಮ್ಮೆನವ್ವಾ. ಚನ್ನಮಲ್ಲಿಕಾರ್ಜುನನಲ್ಲದ ಗಂಡನ ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.

ಅನುಭಾವಿಗಳ ಸಂಗ ಮಾಡುವುದು.

೭೫. ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋರದು. ಸಂಗದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವಸುಖದೋರದು. ಚನ್ನಮಲ್ಲಿಕಾರ್ಜುನದೇವಯ್ಯ, ನಿಮ್ಮ ಶರಣರ ಅನುಭಾವ ಸಂಗದಿಂದಾನು ಪರಮ ಸುಖಿಯಾದೆನು.

೭೬. ಅಯ್ಯ, ನಿಮ್ಮನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು. ಅಯ್ಯ, ನಿಮ್ಮನುಭಾವಿಗಳ ಸಂಗದಿಂದ ಎನ್ನ ಮನ ಶುದ್ಧವಾಯಿತ್ತು. ಅಯ್ಯ, ನಿಮ್ಮನುಭಾವಿಗಳನೊರೆದೊರೆದು ಆಗು ಮಾಡಿದ ಕಾರಣ, ಚನ್ನಮಲ್ಲಿಕಾರ್ಜುನ ನಿಮಗಾನು ತೊಡಿಗೆಯಾದೆನು.

ಒರೆ = ತಿಕ್ಕು; ಆಗು = ಸ್ಥಿತಿ; ತೊಡಿಗೆ = ಆಭರಣ.

೭೭. ಮರ ಮರ ಮಥನಿಸಿ, ಕಿಚ್ಚು ಹುಟ್ಟಿ, ಸುತ್ತಣ ತರು ಮರಾದಿಗಳ ಸುಡಲಾಯಿತ್ತು. ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ, ತನುಗುಣಾದಿಗಳ ಸುಡಲಾಯಿತ್ತು. ಇದು ಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ, ಎನ್ನೊಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ.

ಮಥನಿಸು = ತಿಕ್ಕು; ಒಡಲ = ಶರೀರ.

೭೮. ಅಯ್ಯಾ, ನಿಮ್ಮ ಶರಣರ ಕೂಡಿದ ಸುಖವನುಪಮೆಗೆ ತರಬಾರದಯ್ಯ! ಅಯ್ಯಾ, ನಿಮ್ಮ ಮಹಂತರ ಕೂಡಿಯಾಲಗುವ ಧಾವತಿಯಿಂದ ಸಾವುದೇ ಕರ ಲೇಸು ಕಂಡಯ್ಯ. ಚನ್ನಮಲ್ಲಿಕಾರ್ಜುನಯ್ಯ, ನಿಮ್ಮನರುಹಿದ ಮಹಿಮರನಗಲಿ ಆನು ಸಿಲಲಾರೆನಯ್ಯಾ.

ಕರ = ಬಹಳ; ಅರುಹು = ತಿಳಿಸು.

೭೯. ಹಡೆವುದರಿದು ನರಜನ್ಮವ. ಹಡೆವುದರಿದು ಗುರುಕಾರುಣ್ಯವ. ಹಡೆವುದರಿದು ಲಿಂಗಜಂಗಮದ ಸೇವೆಯ. ಚನ್ನಮಲ್ಲಿಕಾರ್ಜುನಯ್ಯನ ಶರಣರ ಸಂಗದಲ್ಲಿ ನಲಿದಾಡು ಕಂಡೆಯಾ ಎಲೆ ಮನವೇ.

ಹಡೆ = ಪಡೆ; ಅರಿದು = ಆಶ್ಚರ್ಯ; ನಲಿ = ಸಂತೋಷಪಡು.

೮೦. ಆಡುವುದು, ಪಾಡುವುದು, ಕೇಳುವುದು, ಹೇಳುವುದು, ನಡೆವುದು, ನುಡಿವುದು, ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ. ಚನ್ನಮಲ್ಲಿಕಾರ್ಜುನಯ್ಯ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ, ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು.

ಸರಸ = ಚೇಷ್ಟೆ, ಕ್ರಿಯೆ; ಸಮ್ಮೇಳ = ಹೊಂದಿಕೆಯಾಗಿರುವದು.

೮೧. ಅರಿಯದವರೊಡನೆ ಸಂಗವ ಮಾಡಿದರೆ, ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ. ಬಲ್ಲವರೊಡದೆ ಸಂಗವ ಮಾಡಿಹರೆ, ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ. ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ ಕರ್ಪುರದ ಗಿರಿಯ ಉರಿ ಕೊಂಡಂತೆ.

ಹೊಸೆ = ಕಡೆಯು.

೮೨. ಆಯತ ಸ್ವಾಯತ ಅನುಭಾವವ ನಾನೆತ್ತ ಬಲ್ಲೆನಯ್ಯಾ! ಗುರು ಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವನಿತ್ತ ಭಕ್ತರ ಭೃತ್ಯರ ಭೃತ್ಯರಿಗಾಳಾಗಿಪ್ಪೆನಯ್ಯ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರಲ್ಲದನ್ಯವ ತೋರದಿರಯ್ಯಾ.

ಆಯತ = ಒಳಗಾದ.

ಅರಿವ ತೋರಿದನಯ್ಯ ಬಸವಣ್ಣನು. ಅರಿವೇ ಜಂಗಮವೆಂದು ಅರುಹಿದನಯ್ಯ ಬಸವಣ್ಣನು. ಚನ್ನಮಲ್ಲಿಕಾರ್ಜುನಯ್ಯ, ಎನ್ನ ಹೆತ್ತ ತಂದೆ ಸಂಗನಬಸವಣ್ಣ ಎನಗೀ ಕ್ರಮವನರುಹಿದನಯ್ಯ.

ಅರುಹು = ತಿಳಿಸು; ಅರಿವು = ಜ್ಞಾನ

೯೩ ಬಸವಣ್ಣ, ನಿಮ್ಮಂಗದಾಚಾರವ ಕಂಡು ಎನಗೆ ಲಿಂಗಸಂಗವಾಯಿತ್ತು. ಅಯ್ಯ ಬಸವಣ್ಣ, ನಿಮ್ಮ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತಯ್ಯ, ಬಸವಣ್ಣ, ನಿಮ್ಮ ಸದ್ಭಕ್ತಿಯ ತಿಳಿದು ಎನಗೆ ನಿಜವು ಸಾಧ್ಯವಾಯಿತ್ತು. ಚನ್ನಮಲ್ಲಿಕಾರ್ಜುನಯ್ಯನ ಪೆಸರಿಟ್ಟ ಗುರು ನೀವಾದ ಕಾರಣ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೯೪. ಕಾಮನ ಗೆಲಿದೆನು ಬಸವಾ ನಿಮ್ಮ ದಯೆಯಿಂದ. ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪು. ಬಸವಾ ನಿಮ್ಮ ದಯದಿಂದ ಅತಿ ಕಾಮಿ ಚನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಎರಡುಮರೆಯದೆ ಕೂಡಿದೆನು ಬಸವಾ ನಿನ್ನ ಕೃಪೆಯಿಂದ.

ಸೋಮಧರ = ಶಿವ; ತೊಡರು = ಸಂಕೊಲೆ.

೯೫ ಶಿವಶಿವಾ! ಆದಿಯನಾದಿ ಎಂಬೆರಡೂ ಇಲ್ಲದ ನಿರವಯನಾಗಿಪ್ಪ ಶಿವನೇ. ನಿಮ್ಮ ನಿಜವನಾರು ಬಲ್ಲರಯ್ಯ? ವೇದಂಗಳಿಗಭೇದ್ಯನು, ಶಾಸ್ತ್ರಂಗಳಿಗಸಾಧ್ಯನು, ಪುರಾಣಂಗಳಿಗಗಮ್ಯನು, ಆಗಮಂಗಳಿಗಗೋಚರನು, ತರ್ಕಕ್ಕತರ್ಕ್ಯನು, ವಾಙ್ಮನಕ್ಕತೀತನೆನಿಪ ಪರಶಿವಲಿಂಗವನು ಕೆಲಂಬರು ಸಕಲನೆಂಬರು, ಕೆಲಂಬರು ನಿಷ್ಕಲನೆಂಬರು, ಕೆಲಂಬರು ಸೂಕ್ಷ್ಮನೆಂಬರು, ಕೆಲಂಬರು ಸ್ಥೂಲನೆಂಬರು. ಈ ಬಗೆಯ ಭಾವದಿಂದ ಹರಿ ಬ್ರಹ್ಮ ಇಂದ್ರ ಚಂದ್ರ ರವಿ ಕಾಲ ಕಾಮ ದಕ್ಷ ಇವರೊಳಗಾದ ಸಮಸ್ತ ದೇವದಾನವ ಮಾನವರೆಲ್ಲರೂ ಕಾಣಲರಿಯದ ಅಜ್ಞಾನದಿಂದ ಭವಭಾರಿಗಳಾದರು. ಈ ಪರಿಯಲ್ಲಿ ಇವರು ಭವಭಾರಿಗಳಾಗಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಬಂದು ವೀರಶೈವ ಮಾರ್ಗವನೇಪುವುದಕ್ಕೆ ಐವತ್ತೆರಡು ವಿಧವನೊಳಕೊಂಡು ಚರಿಸಿದನು. ಅದೆಂತೆಂದೊಡೆ, ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿ ಧಾರಕನು, ಪಂಚಾಕ್ಷರೀಭಾಷಾಸಮೇತನು, ಲಿಂಗಾಂಗಸಂಬಂಧಿ, ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ, ಪಾದೋದಕಪ್ರಸಾದ ಗ್ರಾಹಕನು, ಗುರುಭಕ್ತಿ ಸಂಪನ್ನನು, ಏಕಲಿಂಗನಿಷ್ಠಾಪರನು, ಚರಲಿಂಗಲೋಲುಪ್ತನು, ಶರಣ ಸಂಗಮೇಶ್ವರನು, ತ್ರಿವಿಧಕ್ಕೆ ಆಯತನು, ತ್ರಿಕರಣಶುದ್ಧನು, ತ್ರಿವಿಧಲಿಂಗಾಂಗಸಂಬಂಧಿ, ಅನ್ಯದೈವಸ್ಮರಣೆಯ ಹೊದ್ದ, ಭವಿಸಂಗವ ಮಾಡ, ಭವಿಪಾಕವ ಕೊಳ್ಳ, ಪರಸ್ತ್ರೀಯರ ಬೆರಸ, ಪರಧನವನೊಲ್ಲ, ಪರನಿಂದೆಯನಾಡ, ಸ್ತುತಿನಿಂದೆಗಳ ಹೊದ್ದ, ಆತ್ಮಸ್ತುತಿಯ ಮಾಡ, ಅನೃತವ ನುಡಿಯ, ಅನ್ಯರ ಬೇಡ, ಹಿಂಸೆಯ ಮಾಡ, ತಾಮಸಭಕ್ತ ಸಂಗವ ಮಾಡ, ಸದಾಚಾರ ಸಂಪನ್ನ, ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದ ಸಮಸ್ತವೆಲ್ಲವ ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ, ಜಂಗಮನಿಂದೆಯ ಸೈರಿಸ, ಪ್ರಸಾದನಿಂದೆಯ ಕೇಳ, ಅನ್ಯರನಾಸೆಗೆಯ್ಯ, ಪಾತ್ರಾಪಾತ್ರವನರಿದೀವ, ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕಳುಕ, ಕುಲಾದಿ ಮದಂಗಳ ಬಗೆಗೊಳ್ಳ, ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ ವಿಕಲ್ಪವ ಮಾಡುವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿಹ, ಷಟ್ಸ್ಥಲಭರಿತ, ಸರ್ವಾಂಗಲಿಂಗಿ, ದಾಸೋಹ ಸಂಪನ್ನ, ನ್ಯಾಯ ನಿಷ್ಠುರ, ನುಡಿದಂತೆ ನಡೆವ, ಮಾಟ ಕೂಟಂಗಳ ಸಂಧಾನಿ, ಮರವಿಲ್ಲದ ಮಹಾಜ್ಞಾನಿ, ಶಿವಶರಣರನುಭಾವಿ, ಕರ್ಮದ ಬಟ್ಟೆಯ ಮೆಟ್ಟ, ಕಲುಷ ಕಾರ್ಪಣ್ಯವ ಮುಟ್ಟ, ಕಾಯಕಕ್ಕಲ್ಲದೆ ಸಲ್ಲ, ಕಾಯದ ಕಳವಳಕ್ಕಂಜ, ಶಿವಧರ್ಮದ ಪುಂಜ, ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚನ್ನಮಲ್ಲಿಕಾರ್ಜುನಾ.

ನಿರವಯ = ನಿರಾಕಾರ, ಬಯಲು; ಅಭೇದ್ಯ = ತಿಳಿಯಲಿಕ್ಕೆ ಅಸಾಧ್ಯ; ವೇದ್ಯ = ತಿಳಿಯಲಿಕ್ಕೆ ಶಕ್ಯ; ಅವಧಾನಿ = ಮನಸ್ಸಿನ ಏಕಾಗ್ರತೆಯುಳ್ಳವನು; ಲೋಲುಪ್ತ = ಮಗ್ನ; ಹಾಗು = ಇಚ್ಛಿಸು; ಅಳುಕು = ಅಂಜು; ಬಗೆಗೊಳ್ಳು = ಮನಸ್ಸಿಗೆ ತರು.

೯೬. ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯ ಶಿವನು. ಕತ್ತಲೆಯ ಪಾಳೆಯುವ ರವಿ ಹೊಕ್ಕಂತಾಯಿತ್ತಯ್ಯ. ಚಿತ್ತದ ಪ್ರವೃತ್ತಿಯ ಹಿಂಗಿಸಿ, ಮುಕ್ತಿರಥವ ತೋರಿದನಲ್ಲ ಅಸಂಖ್ಯಾತರುಗಳಿಗೆ. ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ, ಭಾವವೆಲ್ಲ ಮಹಾಘನದ ಬೆಳಗು. ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣ ಸಮ್ಯಜ್ಞಾನಿ. ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯ ಪ್ರಭುವೇ.

ಪಾಳೆಯ = ಪಾಳ್ಯ, ಠಾಣೆ.

೯೭. ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ. ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢಸ್ಥಲ, ಸಿದ್ಧರಾಮಯ್ಯನ ಸತಾಧಿಸ್ಥಲ, ಇಂತಿವರ ಕರುಣಪ್ರಸಾದವೆನಗಾಯಿತ್ತು ಚನ್ನಮಲ್ಲಿಕಾರ್ಜುನಯ್ಯಾ.

೯೮. ಬಸವಣ್ಣ, ಎನ್ನ ಭಕ್ತಿಯೇ ನಿಮ್ಮ ಧರ್ಮ, ಎನ್ನ ಜ್ಞಾನವೇ ಪ್ರಭುದೇವರ ಧರ್ಮ, ಎನ್ನ ಪರಿಣಾಮವೇ ಚನ್ನಬಸಣ್ಣನ ಧರ್ಮ, ಇಂತೀ ಮೂವರು ಒಂದೊಂದು ಕೊಟ್ಟ ಕಾರಣ ಎನಗೆ ಮೂರು ಭಾವವಾಯಿತ್ತು. ಆ ಮೂರು ಭಾವವ ನಿಮ್ಮಲ್ಲಿ ಸಮರ್ಪಿಸಿದ ಕಾರಣ ಚನ್ನಮಲ್ಲಿಕಾರ್ಜುನಯ್ಯನ ನೆನಹು ಹೋದಲ್ಲಿಯೇ ನಿಮ್ಮ ಕರುಣದ ಕಂದನು ಕಾಣಾ ಸಂಗನಬಸವಣ್ಣಾ.

೯೯. ಬಸವಣ್ಣನ ಮನೆಯ ಮಗಳಾದ ಕಾರಣ ಭಕ್ತಿಪ್ರಸಾದವ ಕೊಟ್ಟನ. ಪ್ರಭುದೇವರ ತೊತ್ತಿನ ತೊತ್ತಿನ ಮರಿದೊತ್ತಿನ ಮಗಳಾದ ಕಾರಣ ಜ್ಞಾನಪ್ರಸಾದವ ಕರುಣಿಸಿ ಕೊಟ್ಟನು. ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ ಪ್ರಾಣಪ್ರಸಾದವ ಕರುಣಿಸಿ ಕೊಟ್ಟನು. ಮಡಿವಾಳಯ್ಯನ

ಮನೆಯ ಮಗಳಾದ ಕಾರಣ ನಿರ್ಮಲ ಪ್ರಸಾದವ ನಿಶ್ಚಯಿಸಿ ಕೊಟ್ಟನು. ಇಂತೀ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ಕರುಣದ ಕಂದನೆಂದು ತಲೆದಡಹಿದ ಕಾರಣ ಚನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು.

ತಡಹು = ಮುಟ್ಟು.

೧೦೦. ಸಂಗನಬಸವಣ್ಣನ ಪಾದವ ಕಂಡೆನಾಗಿ ಎನ್ನಂಗ ನಾಸ್ತಿಯಾಯಿತ್ತು. ಚನ್ನಬಸವಣ್ಣನ ಪಾದವ ಕಂಡೆನಾಗಿ ಎನ್ನ ಪ್ರಾಣ ನಾಸ್ತಿಯಾಯಿತ್ತು. ಪ್ರಭುವೇ ನಿಮ್ಮ ಶ್ರೀಚರಣಕ್ಕೆ ಶರಣೆಂದೆನಾಗಿ ಎನಗೆ ಅರುಹು ಸ್ವಾಯತವಾಯಿತ್ತು. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಕರುಣವ ಪಡೆದೆನಾಗಿ ಎನಗಾವ ಜಂಜಡವಿಲ್ಲವಯ್ಯ ಪ್ರಭುವೇ.

ಜಂಜಡ = ತೊಂದರೆ

೧೦೧. ಮಾಟ ಕೂಟ ಬಸವಣ್ಣಂಗಾಯಿತ್ತು. ನೋಟ ಕೂಟ ಪ್ರಭುದೇವರಿಗಾಯಿತ್ತು. ಭಾವ ಕೂಟ ಅಜಗಣ್ಣಂಗಾಯಿತ್ತು. ಸ್ನೇಹ ಕೂಟ ಬಾಚಿರಾಜಂಗಾಯಿತ್ತು. ಇವರೆಲ್ಲರ ಕೂಟ ಚನ್ನಬಸವಣ್ಣಂಗಾಯಿತ್ತು. ಎನಗಿನ್ನಾವ ಕೂಟವಿಲ್ಲವಯ್ಯ ಚನ್ನಮಲ್ಲಿಕಾರ್ಜುನಯ್ಯ.

ಮಾಟ = ಕ್ರಿಯೆ.

೧೦೨. ಮಾಟಕೂಟದಲ್ಲಿ ಬಸವಣ್ಣನಿಲ್ಲ. ನೋಟಕೂಟದಲ್ಲಿ ಪ್ರಭುದೇವರಿಲ್ಲ. ಭಾವಕೂಟದಲ್ಲಿ ಅಜಗಣ್ಣನಿಲ್ಲ. ಸ್ನೇಹಕೂಟದಲ್ಲಿ ಬಾಚಿರಾಜನಿಲ್ಲ. ಇವರೆಲ್ಲರ ಕೂಟದಲ್ಲಿ ಚನ್ನಬಸವಣ್ಣನಿಲ್ಲ. ಎನಗಿನ್ನೇನಯ್ಯ ಚನ್ನಮಲ್ಲಿಕಾರ್ಜುನಯ್ಯ?

೧೦೩. ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿನಗೆ. ಮಾಟವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚನ್ನಬಸವಣ್ಣಂಗೆ. ಬಂದ ಭಾವ ಸಲೆ ಸಂದಿತ್ತು. ಎನ್ನಂಗದವಸಾನ ಹೇಳಾ ಚನ್ನಮಲ್ಲಿಕಾರ್ಜುನಯ್ಯ.

ಕದಳಿ = ಅರಣ್ಯದ ಮಧ್ಯಸ್ಥಳ; ಅವಸಾನ = ಅಂತ್ಯ.

ಮಹೇಶ್ವರ ಸ್ಥಲ.

೧೦೪. ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ, ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯಾ? ಮಾಡಲಾಗದು ಅಳಿಮನವ. ಮಾಡಿದೊಡೆ ಮನದೊಡೆಯ ಬಲ್ಲನೈಸೆ. ವಿರಳವಿಲ್ಲದೆ ಮಣಿಯ ಪೋಣಿಸಿಹೆನೆಂದೊಡೆ, ದುರುಳ ಚನ್ನಮಲ್ಲಿಕಾರ್ಜುನಯ್ಯನೆಂತೊಲಿವನಯ್ಯ?

ಆಳುತನ = ಒಡೆತನ; ಅಳಿ = ಕ್ಷುದ್ರ; ವಿರಳವಿಲ್ಲದೆ = ಒಂದೇಸವನೆ.

೧೦೫ ಹುಟ್ಟದ ಯೋನಿಯಲ್ಲಿ ಹುಟ್ಟಿಸಿ, ಬಾರದ ಭವಂಗಳಲ್ಲಿ ಬರಿಸಿ, ಉಣ್ಣದ ಊಟವನುಣಿಸಿ, ವಿಧಿಗೊಳಗಾಗಿಸುವ ಕೇಳಿರಣ್ಣಾ! ತನ್ನವರೆಂದೊಡೆ. ಮನ್ನಿಸುವನೇ ಶಿವನು? ಹತ್ತಿರ್ದ ಭೃಂಗಿಯ ಚರ್ಮವ ಕಿತ್ತೀಡಾಡಿದನು. ಮತ್ತೆ ಕೆಲಂಬರ ಬಲ್ಲನೇ? ಇದನರಿದು ಬಿಡದಿರು. ಚನ್ನಮಲ್ಲಿಕಾರ್ಜುನನಿಂತಹ ಸಿತಗನವ್ವಾ.

ಈಡಾಡು = ಎಳೆ; ಸಿತಗ = ಪುಂಡ.

೧೦೬ ಹಸಿವಾದೊಡೆ ಭಿಕ್ಷಾನ್ನಗಳುಂಟು. ತೃಷೆಯಾದೊಡೆ, ಕೆರೆ ಹಳ್ಳ ಬಾವಿಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು. ಚನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು.

ತೃಷೆ = ನೀರಡಿಕೆ; ಸಂಗಾತ = ಜೋಡು.

೧೦೭. ಆರೂ ಇಲ್ಲದವಳೆಂದು ಅಳಿಗೊಳಲುಬೇಡ ಕಂಡೆಯ್ಯಾ. ಏನು ಮಾಡಿದಡೆಯೂ, ನಾನಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಿಗೆಯ ಮೇಲೊರಗಿ ನಾನಿಹೆನು. ಚನ್ನಮಲ್ಲಿಕಾರ್ಜುನಯ್ಯ, ಕರ ಕೆಡೆ ನೋಡಿದೊಡೆ, ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು.

ಅಳಿಗೊಳು = ತೊಂದರೆಕೊಡು, ನಾಶಮಾಡು; ತರಗೆಲೆ = ಒಣಗಿದ ಎಲೆ; ಮೆಲ್ಲು = ತಿನ್ನು; ಸುರಿಗೆ = ಕತ್ತಿ; ಒರಗು = ಮಲಗು; ಕರ ಕೆಡೆ = ಬಹಳ ಕೆಟ್ಟ ರೀತಿಯಿಂದ.

೧೦೮. ಕಿಡಿಕಿಡಿ ಕೆದರಿದಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದು ಬಿದ್ದಡೆ, ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು. ಚನ್ನಮಲ್ಲಿಕಾರ್ಜುನಯ್ಯ ಶಿರಹರಿದು ಬಿದ್ದಡೆ, ಪ್ರಾಣ ನಿಮಗರ್ಪಿತವೆಂಬೆನು.

ಕೆದರು = ಹರವು, ಸಿಡಿ; ಮಜ್ಜನ = ಸ್ನಾನ.

೧೦೯. ಚಂದನವ ಕಡಿದು ಕೊರೆದು ತೇದಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ, ಕಡಿದೊರೆದೊಡೆ, ಬೆಂದು ಕಳಂಕ ಹಿಡಿದಿತ್ತೆ? ಸಂದು ಸಂದು ಕಡಿದ ಕಬ್ಬಿನವ ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿಯೇ? ಎನ್ನ ತಂದೆ ಚನ್ನಮಲ್ಲಿಕಾರ್ಜುನದೇವಯ್ಯ ಕೊಂದಡೆ ಶರಣೆಂಬುದ ಮಾಣೆ.

ಒರೆ = ತಿಕ್ಕು; ಕಳಂಕ = ಕಪ್ಪು.

೧೧೦. ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯಾ. ಬೇಡಿದೊಡೆ ಇಕ್ಕದಂತೆ ಮಾಡಯ್ಯಾ. ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯಾ. ನೆಲಕ್ಕೆ ಬಿದ್ದಡೆ, ನಾನೆತ್ತಿಕೊಂಬುದಕ್ಕೆ ಮುನ್ನವೆ ಶುನಿ ಎತ್ತಿಕೊಂಬಂತೆ ಮಾಡಯ್ಯಾ ಚನ್ನಮಲ್ಲಿಕಾರ್ಜುನಯ್ಯಾ.

ಶುನಿ = ನಾಯಿ

೧೧೧. ಕಾಯ ಕರ್ರನೆ ಕಂದಿದರೇನು? ಕಾಯ ಮಿರ್ರನೆ ಮಿಂಚಿದರೇನು? ಅಂತರಂಗ ಶುದ್ಧವಾದ ಬಳಿಕ ಕಾಯವೇನಾದಡೇನಯ್ಯಾ? ಚನ್ನಮಲ್ಲಿಕಾರ್ಜುನನೊಲಿದ ಕಾಯವೇನಾದಡೆ ನಿಮಗೇನಯ್ಯಾ?

೧೧೨ ಶೀಲ ಶೀಲವೆಂತೆಂಬಿರಯ್ಯಾ. ಶೀಲದ ನೆಲೆಯ ಬಲ್ಲರೆ ಹೇಳಿರೋ. ।ಅರಿಯದಿರ್ದಡೆ ಕೇಳಿರೋ. ಕಾಮ ಒಂದು ಭವಿ, ಕ್ರೋಧ ಎರಡನೇ ಭವಿ, ಲೋಭ ಮೂರನೇ ಭವಿ, ಮೋಹ ನಾಲ್ಕನೇ ಭವಿ, ಮದ ಐದನೇ ಭವಿ, ಮತ್ಸರ ಆರನೇ ಭವಿ, ಆಮಿಷ ಏಳನೇ ಭವಿ, ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು ಲಿಂಗವಿಲ್ಲದ

ವರ ಭವಿ ಭವಿ ಎಂಬರು. ತವ್ಮ್ಯಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ, ಅಚ್ಚ ಪ್ರಸಾದಿ, ನಿಚ್ಚ ಪ್ರಸಾದಿ, ಸಮಯ ಪ್ರಸಾದಿಗಳೆಂದು ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ ಹಗಲುಗಳ್ಳರ ಮೆಚ್ಚುವನೆ ಚನ್ನಮಲ್ಲಿಕಾರ್ಜುನ?

ನೆಲೆ = ರೀತಿ, ಹದ; ಆಮಿಷ = ಆಶೆ.

೧೧೩. ಭವಿ ಸಂಗವಳಿದು ಶಿವಭಕ್ತನಾದ ಬಳಿಕ ಭಕ್ತಂಗೆ ಭವಿಸಂಗವತಿ ಘೋರ ನರಕ. ಶರಣಸತಿ ಲಿಂಗಪತಿಯಾದ ಬಳಿಕ ಶರಣಂಗೆ ಸತಿಸಂಗವತಿ ಘೋರ ನರಕ. ಚನ್ನಮಲ್ಲಿಕಾರ್ಜುನ ಲಿಂಗೈಕ್ಯಂಗೆ ಪ್ರಾಣಗುಣವಳಿಯದವರ ಸಂಗವೇ ಭಂಗ.

ಭಂಗ=ಅಪಮಾನ

೧೧೪. ಹಾಲ ಹಿಡಿದು ಬೆಣ್ಣೆಯನರಸಲುಂಟೆ? ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ? ಲಿಂಗದ ಪಾದತೀರ್ಥ ಪ್ರಸಾದವ ಕೊಂಡು ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇತಕ್ಕೆ? ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೊಡೆ, ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲಿ. ಅದೆಂತೆಂದೊಡೆ. ಶಿವಧರ್ಮ ಪುರಾಣೆ ॥ಶ್ಲೋ॥ ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗ ನಮಸ್ಕೃತಃ । ಶ್ವಾನಯೋನಿ ಶತಂಗತ್ವಾ ಚಾಂಡಾಲಗೃಹಮಾಚರೇತ್ ॥ ಎಂದುದಾಗಿ ಇದನರಿದು, ಗುರುಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಂಗಳು, ಎಲ್ಲ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯಾ! ಇಂತಲ್ಲದೆ ಗುರುಕೊಟ್ಟ ಲಿಂಗವ ಕಿರಿದು ಮಾಡಿ, ತೀರ್ಥಲಿಂಗವ ಹಿರಿದು ಮಾಡಿ, ಹೋದಾತಂಗೆ ಅಘೋರ ನರಕ ತಪ್ಪದು ಕಾಣಾ ಚನ್ನಮಲ್ಲಿಕಾರ್ಜುನಾ.

ಪ್ರಸಾದಿಸ್ಥಲ.

ಪ್ರಸಾದ.

೧೧೫. ನಾನು ಮಜ್ಜನವ ಮಾಡುವುದಕ್ಕೆ ಮುನ್ನವೆ, ಜಂಗ
ಮಕ್ಕೆ ಮಜ್ಜನವ ಮಾಡಿಸುವೆ. ನಾನು ಸೀರೆಯನುಡುವುದಕ್ಕೆ ಮುನ್ನವೆ,
ಜಂಗಮಕ್ಕೆ ದೇವಾಂಗವನುಡಿಸುವೆ. ನಾನು ಪರಿಮಳವ ಲೇಪಿಸುವು
ದಕ್ಕೆ ಮುನ್ನವೆ, ಜಂಗಮಕ್ಕೆ ಸುಗಂಧ ದ್ರವ್ಯಂಗಳ ಲೇಪಿಸುವೆ. ನಾನು
ಅಕ್ಷತೆಯನಿಡುವುದಕ್ಕೆ ಮುನ್ನವೆ, ಜಂಗಮಕ್ಕೆ ಅಕ್ಷತೆಯನಿಡುವೆ. ನಾನು
ಪುಷ್ಪವ ಮುಡಿವುದಕ್ಕೆ ಮುನ್ನವೆ, ಜಂಗಮಕ್ಕೆ ಪರಿಮಳ ಪುಷ್ಪವ
ಮುಡಿಸುವೆ. ನಾನು ಧೂಪ ವಾಸನೆಯ ಕೊಳ್ಳದ ಮುನ್ನವೆ ಜಂಗ
ಮಕ್ಕೆ ಧೂಪವಾಸನೆಯ ಕೊಡುವೆ. ನಾನು ದೀಪಾರತಿಯ ನೋಡದ
ಮುನ್ನವೆ, ಜಂಗಮಕ್ಕೆ ಆರತಿಯ ನೋಡಿಸುವೆ. ನಾನು ಸಕಲ
ಪದಾರ್ಥವ ಸ್ವೀಕರಿಸುವ ಮುನ್ನವೆ, ಜಂಗಮಕ್ಕೆ ಮೃಷ್ಟಾನ್ನವ ನೀಡಿಸುವೆ.
ನಾನು ಪಾನಂಗಳ ಕೊಳ್ಳದ ಮುನ್ನವೆ, ಜಂಗಮಕ್ಕೆ ಅಮೃತ ಪಾನಂಗಳ
ಕೊಡುವೆ. ನಾನು ಕೈದೊಳೆಯದ ಮುನ್ನವೆ, ಜಂಗಮಕ್ಕೆ ಹಸ್ತ
ಪ್ರಕ್ಷಾಳನವ ಮಾಡಿಸುವೆ. ನಾನು ವೀಳೆಯವ ಮಾಡುವುದಕ್ಕೆ ಮುನ್ನವೆ,
ಜಂಗಮಕ್ಕೆ ತಾಂಬೂಲವ ಕೊಡುವೆ. ನಾನು ಗದ್ದುಗೆಯ ಮೇಲೆ
ಕುಳ್ಳಿರುವುದಕ್ಕೆ ಮುನ್ನವೆ, ಜಂಗಮಕ್ಕೆ ಉನ್ನತಾಸನವನಿಕ್ಕುವೆ. ನಾನು
ಸುನಾದಂಗಳ ಕೇಳುವುದಕ್ಕೆ ಮುನ್ನವೆ, ಜಂಗಮಕ್ಕೆ ಸಂಗೀತ ವಾದ್ಯಂ
ಗಳ ಕೇಳಿಸುವೆ. ನಾನು ಭೂಷಣಂಗಳ ತೊಡುವುದಕ್ಕೆ ಮುನ್ನವೆ,
ಜಂಗಮಕ್ಕೆ ಆಭರಣಂಗಳ ತೊಡಿಸುವೆ. ವಾಹನಂಗಳನೇರುವುದಕ್ಕೆ
ಮುನ್ನವೆ, ಜಂಗಮಕ್ಕೆ ವಾಹನಂಗಳನೇರಿಸುವೆ. ಇಂತೀ ಹದಿನಾರು
ತೆರದ ಭಕ್ತಿಯನು ಚರಲಿಂಗಕ್ಕೆ ಕೊಟ್ಟು ಆ ಚರಲಿಂಗ ಮೂರ್ತಿ
ಭೋಗಿಸಿದ ಬಳಿಕ ನಾನು ಪ್ರಸಾದ ಮುಂತಾಗಿ ಭೋಗಿಸುವೆನಲ್ಲದೆ,
ಜಂಗಮವಿಲ್ಲದೆ ಇನಿತರೊಳಗೊಂದು ಭೋಗವನಾದಡೂ ನಾನು ಭೋಗಿ
ಸಿದೆನಾದೊಡೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಇಂತೀ ಕ್ರಮದಲ್ಲಿ
ನಡೆದಾತಂಗೆ ಗುರುವುಂಟು, ಲಿಂಗವುಂಟು, ಜಂಗಮವುಂಟು, ಪಾದೋ

ದಕವುಂಟು, ಪ್ರಸಾದವುಂಟು, ಆಚಾರವುಂಟು. ಭಕ್ತಿಯುಂಟು. ಈ ಕ್ರಮದಲ್ಲಿ ನಡೆಯದಾತಂಗೆ, ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ, ಆಚಾರವಿಲ್ಲ, ಸದ್ಭಕ್ತಿಯಿಲ್ಲ. ಅವನ ಬಾಳುವೆ ಹಂದಿಯ ಬಾಳುವೆ. ಅವನ ಬಾಳುವೆ ನಾಯ ಬಾಳುವೆ. ಅವನ ಬಾಳುವೆ ಕತ್ತೆಯ ಬಾಳುವೆ. ಅವನು ಸುರೆಮಾಂಸಭಂಜಕನು. ಅವನು ಸರ್ವ ಚಾಂಡಾಲನಯ್ಯ ಚನ್ನಮಲ್ಲಿಕಾರ್ಜುನಾ.

ದೇವಾಂಗ=ವಸ್ತ್ರ.

೧೧೬. ಲಿಂಗಕ್ಕೆ ರೂಪನರ್ಪಿಸುವೆ, ಜಂಗಮಕ್ಕೆ ರುಚಿಯನರ್ಪಿಸುವೆ. ಕಾಯಕ್ಕೆ ಶುದ್ಧ ಪ್ರಸಾದವ ಕೊಂಬೆ, ಪ್ರಾಣಕ್ಕೆ ಸಿದ್ಧ ಪ್ರಸಾದವ ಕೊಂಬೆ. ನಿಮ್ಮ ಪ್ರಸಾದದಿಂದ ಧನ್ಯಳಾದೆನಯ್ಯ ಚನ್ನಮಲ್ಲಿಕಾರ್ಜುನಾ.

೧೧೭. ಕಾಯಪ್ರಸಾದವೆನ್ನ, ಜೀವಪ್ರಸಾದವೆನ್ನ, ಪ್ರಾಣಪ್ರಸಾದವೆನ್ನ, ಭಾವಪ್ರಸಾದವೆನ್ನ, ಸುಯಿಧಾನ ಪ್ರಸಾದವೆನ್ನ, ಸಮಯ ಪ್ರಸಾದವೆನ್ನ, ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಪ್ರಸಾದವ ಹಾಸಿ ಹೊದೆದುಕೊಂಡಿಪ್ಪೆನು.

ಸುಯಿಧಾನ=ಏಕಾಗ್ರತೆ, ಸಮಾಧಾನ; ಸಮಯ = ಸಮಾಜ, ಸಮಾಜದಕಟ್ಟು, ವ್ಯವಸ್ಥೆ.

೧೧೮ ಭಾವಿಸಿ ನೋಡಿದೊಡೆ, ಅಂಗವಾಯಿತ್ತು. ಅಂಗಗುಣ ವಳಿದುಳಿದ ಬಳಿಕ ನಿನಗಂಗವಾನೇ. ಭಿನ್ನರುಚಿಯು ಬಿಟ್ಟು ಲಿಂಗ ರುಚಿಯಾದ ಬಳಿಕ ಚನ್ನಮಲ್ಲಿಕಾರ್ಜುನನ ಕೊಂಡು ಸಾವ ಭಾಷೆ.

೧೧೯. ಅಯ್ಯಾ ಚಿದಂಗ ಚಿದ್ಘನ ಲಿಂಗಶಕ್ತಿ ಭಕ್ತಿ ಹಸ್ತ ಮುಖ ಪದಾರ್ಥ ಪ್ರಸಾದವೆಂಬಿವಾದಿಯಾದ ಸಮಸ್ತ ಸಕೀಲಂಗಳ ನೆಲೆ ಕಲೆಯನರಿಯದೆ, ಜಿಹ್ವಾಲಂಪಟಕ್ಕೆ ಆಹ್ವಾನಿಸಿ, ಗುಹ್ಯಾಲಂಪಟದಲ್ಲಿ ವಿಸರ್ಜಿಸಿ, ಸಕಲೇಂದ್ರಿಯ ಮುಖದಲ್ಲಿ ಮೋಹಿಯಾಗಿ, ಸದ್ಗುರು ಕರುಣಾಮೃತ ರಸ ತಾನೆಂದರಿಯದೆ, ಬರಿದೆ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಗುರು ಚರ ಪರವೆಂದು ಬೊಗಳುವ ಕುನ್ನಿ

ಗಳ ನೋಡಿ ಎನ್ನ ಮನ ಬೆರಗು ನಿಬ್ಬೆರಗು ಆಯಿತ್ತಯ್ಯ ಚನ್ನಮಲ್ಲಿಕಾರ್ಜುನಾ.

ಆಹ್ವಾನಿಸು = ಕರೆಯು, ಒಳಗಾಗು; ಬೆರಗು = ಆಶ್ಚರ್ಯ; ನಿಬ್ಬೆರಗು = ವಿಶೇಷ ಆಶ್ಚರ್ಯ.

೧೨೦. ಅಯ್ಯಾ ಪರಾತ್ಪರ ಸತ್ಯ ಸದಾಚಾರ ಗುರುಲಿಂಗ ಜಂಗಮದ ಶ್ರೀ ಚರಣವನ್ನು ಹಿಂದೆ ಹೇಳಿದ ಅಚ್ಚಪ್ರಸಾದಿಯೋಪಾದಿಯಲ್ಲಿ ನಿರ್ವಂಚಕತ್ವದಿಂದ ಗುರುಲಿಂಗಜಂಗಮಕ್ಕೆ ಅರ್ಥ ಪ್ರಾಣಾಭಿಮಾನವ ಸಮರ್ಪಿಸಿ ಒಪ್ಪೊತ್ತು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪಾದಾರ್ಚನೆಯ ಮಾಡಿ ಪಾದೋದಕ ಪ್ರಸಾದವನ್ನು ತನ್ನ ಸರ್ವಾಂಗದಲ್ಲಿ ನೆಲಿಸಿರ್ಪ ಇಷ್ಟ ಮಹಾಲಿಂಗ ದೇವಂಗೆ ಕೊಟ್ಟು ಕೊಂಬುವಂತಹದೇ ಇದಿರಿಟ್ಟು ಜಂಗಮ ಪಾದೋದಕ ಪ್ರಸಾದವ ಕೊಂಬ ಆಚರಣೆಯ ನಿಲುಕಡೆಯು ನೋಡಾ. ಆ ಮೇಲೆ ಜಿಪ್ಪೊತ್ತು ಸಂಬಂಧವಿಟ್ಟು ಆಚರಿಸುವ ನಿಲುಕಡೆ ಎಂತೆಂದೊಡೆ, ಅಯ್ಯ ನಿನ್ನ ಷಟ್‌ಸ್ಥಾನದಲಿ ನೆಲಿಸಿರ್ಪ ಇಷ್ಟ ಮಹಾಲಿಂಗದೇವನ ತ್ರಿವಿಧ ಸ್ಥಾನದಲ್ಲಿ ಬಸವಣ್ಣ ಚನ್ನಬಸವಣ್ಣ ಅಲ್ಲಮಪ್ರಭು ಎಂಬ ತ್ರಿವಿಧ ನಾಮ ಸ್ವರೂಪವಾದ ಷೋಡಶಾಕ್ಷರಂಗಳೇ ಷೋಡಶ ವರ್ಣವಾಗಿ ನೆಲಿಸಿರ್ಪರು ನೋಡಾ. ಇಂತು ಷೋಡಶ ಕಲಾಸ್ವರೂಪವಾದ ಚಿದ್ಘನ ಮಹಾಲಿಂಗ ದೇವನ ನಿರಂಜನ ಜಂಗಮದೋಪಾದಿಯಲ್ಲಿ ಸಗುಣ ನಿರ್ಗುಣ ಪೂಜೆಗಳ ಮಾಡಿ ಜಂಗಮ ಚರಣ ಸೋಂಕಿನಿಂ ಬಂದ ಗುರುಪಾದೋದಕವಾದರೂ ಸರಿಯೇ, ಅದು ದೊರೆಯದಿರ್ದೊಡೆ ಲಿಂಗಾಣತಿಯಿಂದ ಬಂದೊದಗಿದ ಪರಿಣಾಮೋದಕವಾದರೂ ಸರಿಯೇ, ಒಂದು ಭಾಜನದಲ್ಲಿ ಸೂಕ್ಷ್ಮದಿಂದ ರಚಿಸಿ, ಆ ಉದಕದೊಳಗೆ ಹಸ್ತೋದಕ ಮಂತ್ರೋದಕವ ಮಾಡಿ, ಆ ಮೇಲೆ ಅನಾದಿ ಪ್ರಣಮವ ಪ್ರಸಾದಪ್ರಣವದೊಳಗೆ ಅಖಂಡ ಮಹಾಜ್ಯೋತಿಪ್ರಣಮವ ಲಿಖಿತವ ಮಾಡಿ, ಶ್ರದ್ಧಾದಿಯಾದ ಪೂರ್ಣಭಕ್ತಿಯಿಂದ ಮಹಾ ಚಿದ್ಘನ ತೀರ್ಥವೆಂದು ಭಾವಿಸಿ, ಪಂಚಾಕ್ಷರ ಷಡಕ್ಷರ ಮಂತ್ರಧ್ಯಾನದಿಂದ ಅನಿಮಿಷ ದೃಷ್ಟಿಯಿಂದ ನಿರೀಕ್ಷಿಸಿ,

ಮೂರು ವೇಳೆ ಪ್ರದಕ್ಷಣೆಯ ಮಾಡಿ, ಆ ಚಿದ್ಘನ ತೀರ್ಥವನ್ನು ದ್ವಾದಶ ದಳ ಕಮಲದಲ್ಲಿ ನೆಲಿಸಿರುವ ಇಷ್ಟ ಮಹಾಲಿಂಗಜಂಗಮಕ್ಕೆ ಅಷ್ಟ ವಿಧ ಮಂತ್ರ ಸಕೀಲಂಗಳಿಂದ ಅಚಾರಾದಿ ಶೂನ್ಯಾಂತವಾದ ಅಷ್ಟವಿಧ ಲಿಂಗಧ್ಯಾನದಿಂದ ಅಷ್ಟವಿಧ ಬಂಧಗಳ ಸಮರ್ಪಿಸಿದಲ್ಲಿಗೆ ಅಷ್ಟವಿಧೋ ದಕವಾಗುವದಯ್ಯ. ಆ ಇಷ್ಟ ಮಹಾಲಿಂಗ ಜಂಗಮವೇ ಅಷ್ಟಾದಶ ಸ್ಮರಣೆಯಿಂದ ಮುಗಿದಲ್ಲಿಗೆ ನವಮೋದಕವಾಗುವದಯ್ಯ. ಉಳಿದು ದಕವು ತ್ರಿವಿಧೋದಕವೆನಿಸುವದಯ್ಯ. ಹೀಗೆ ಮಹಾಜ್ಞಾನ ಲಿಂಗ ಜಂಗಮಸ್ವರೂಪವಾದ ತೀರ್ಥವ ಮುಗಿದ ಮೇಲೆ ತಟ್ಟೆ ಬಟ್ಟಲಲ್ಲಿ ಎಡೆ ಮಾಡಬೇಕಾದರೆ ಗೃಹದಲ್ಲಿರ್ದ ಕ್ರಿಯಾಶಕ್ತಿಯರಿಗೆ ಧಾರಣವಿದ್ದರೆ ತಾವು ಸಲಿಸಿದ ಪಾದೋದಕ ಪ್ರಸಾದವ ಕೊಡುವುದಯ್ಯ. ಸಹಜ ಲಿಂಗಭಕ್ತರಾದರೆ, ಮುಖಮಜ್ಜನವ ಮಾಡಿಸಿ, ತಾ ಧರಿಸುವ ವಿಭೂತಿ ಧಾರಣವ ಮಾಡಿಸಿ, 'ಶಿವ ಶಿವ ಹರಹರಾ ಬಸವಲಿಂಗಾ' ಎಂದು ಬೋಧಿಸಿ, ಎಡೆ ಮಾಡಿಸಿಕೊಂಬುದಯ್ಯ. ಆ ಮೇಲೆ ತಾನು ಸ್ಥೂಲ ವಾದೊಡೆ, ಸಂಬಂಧವಿಟ್ಟು, ಪರಸ್ಥಲವಾದೊಡೆ, ಚಿದ್ಘನ ಇಷ್ಟಮಹಾ ಲಿಂಗಜಂಗಮವ ಕರಸ್ಥಲದಲ್ಲಿ ಮೂರ್ತವ ಮಾಡಿಸಿಕೊಂಡು, ದಕ್ಷಿಣ ಹಸ್ತದಲ್ಲಿ ಗುರುಲಿಂಗಜಂಗಮಸೂತ್ರವಿಡಿದು ಬಂದ ಕ್ರಿಯಾಭಸಿತವ ಲೇಪಿಸಿ, ಮೂಲ ಪ್ರಣವು, ಪ್ರಸಾದ ಪ್ರಣವದೊಳಗೆ ಗೋಳಕ ಪ್ರಣವು, ಅಖಂಡ ಗೋಳಕ ಪ್ರಣವು, ಅಖಂಡ ಮಹಾಗೋಳಕ ಪ್ರಣವು, ಜ್ಯೋತಿ ಪ್ರಣವು ಧ್ಯಾನದಿಂದ ದ್ವಾದಶ ಮಣಿಯ ಧ್ಯಾನಿಸಿ ಪ್ರದಕ್ಷಿಣ ಮಾಡಿ, ಮೂಲಮೂರ್ತಿಲಿಂಗಜಂಗಮದ ಮಸ್ತಕದ ಮೇಲೆ ಸ್ಪರ್ಶನವ ಮಾಡಿ, ಬಟ್ಟಲಿಗೆ ಮೂರು ವೇಳೆ ಸ್ಪರ್ಶನವ ಮಾಡಿ ಪದಾರ್ಥದ ಪೂರ್ವಾಶ್ರ ಯವ ಕಳೆದು, ಶುದ್ಧ ಪ್ರಸಾದವೆಂದು ಭಾವಿಸಿ ಇಷ್ಟಮಹಾಲಿಂಗ ಜಂಗ ಮಕ್ಕೆ ಅಷ್ಟಾದಶಮಂತ್ರಸ್ಮರಣೆಯಿಂದ ಮೂರು ವೇಳೆ ರೂಪನರ್ಪಿಸಿ ಎರಡು ವೇಳೆ ರೂಪವ ತೋರಿ, ಸುರುಚಿ ಪ್ರಾಣಲಿಂಗ ಮಂತ್ರ ಜಿಹ್ವೆ ಯಲ್ಲಿಟ್ಟು, ಆರನೆಯ ವೇಳೆ ಭೋಜನವ ಇಷ್ಟಮಹಾಲಿಂಗ ಮಂತ್ರ ಧ್ಯಾನದಿಂದ ಸಮರ್ಪಿಸಿ, ಷಡ್ವಿಧ ಲಿಂಗಲೋಲುಪ್ತಿಯಿಂದ ಸಂತೃಪ್ತನಾಗಿ

ಆಚರಿಸಿದಾತನೇ ಗುರುಭಕ್ತನಾದ ನಿಚ್ಚಪ್ರಸಾದಿ ಎಂಬೆ ಚನ್ನಮಲ್ಲಿ ಕಾರ್ಜುನ.

ಇದಿರಿಡು=ಭಿನ್ನತೆಯಿಂದ ಆಚರಿಸು; ನಿಲುಕಡೆ =ಸ್ಥಿತಿ; ಆಣತಿ= ಆಜ್ಞೆ; ಭಾಜನ= ಪದಾರ್ಥಗಳನ್ನು ಇಡುವ ಸ್ಥಳ, ಪಾತ್ರೆ; ಅನಿಮಿಷದೃಷ್ಟಿ = ಎವೆ ಹಳಚದೆ ನೋಡುವದು.

ಪ್ರಸಾದಿಯ ಪರಿಪೂರ್ಣತೆ.

೧೨೧. ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ ? ಮನ ನಿಮ್ಮ ರೂಪಾದ ಬಳಿಕ, ನಾನಾರ ನೆನೆವೆ ? ಪ್ರಾಣ ನಿಮ್ಮ ರೂಪಾದ ಬಳಿಕ, ನಾನಾರನಾರಾಧಿಸುವೆ ? ಅರಿವು ನಿಮ್ಮಲ್ಲಿ ಸ್ವಯ ವಾದ ಬಳಿಕ, ನಾನಾರನರಿವೆ ? ಚನ್ನಮಲ್ಲಿಕಾರ್ಜುನಾ, ನಿಮ್ಮಲ್ಲಿ ನೀವಾಗಿ ನಿಮ್ಮಿಂದ ನಿಮ್ಮ ಮರೆದೆನಯ್ಯಾ.

ಸ್ವಯ = ಏಕಾಕಾರವಾಗುವದು.

೧೨೨. ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗವನಂಗವಾ ಯಿತ್ತು. ಮನವರಿದು ಲಿಂಗಕ್ಕರ್ಪಿಸಿ ಮನ ಲೀಯವಾಯಿತ್ತು. ಭಾವವ ನಿರ್ಭಾವಕ್ಕರ್ಪಿಸಿ, ಭಾವ ಬಯಲಾಯಿತ್ತು. ಇಂತೀ ಅಂಗಮನ ಭಾವವೇದ ಕಾರಣ ಕಾಯವಕಾಯವಾಯಿತ್ತು. ಎನ್ನ ಅಕಾಯದ ಸುಖಭೋಗವ ಲಿಂಗವೇ ಭೋಗಿಸುವನಾಗಿ ಶರಣಸತಿ ಲಿಂಗಪತಿಯಾ ದೆನು. ಇದು ಕಾರಣ ಚನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು.

೧೨೩. ಕಾಯದೊಳಗೆ ಅಕಾಯವಾಯಿತ್ತು. ಜೀವದೊಳಗೆ ನಿರ್ಜೀವವಾಯಿತ್ತು. ಭಾವದೊಳಗೆ ನಿರ್ಭಾವವಾಯಿತ್ತು. ಎನ್ನ ಮನ ಗೆಟ್ಟವಳನೇತಕ್ಕೆ ನುಡಿಸುವಿರಯ್ಯ ಪ್ರಭುವೆ ?

೧೨೪. ಐದು ಪರಿಯ ಬಣ್ಣವ ತಂದು ಕೊಟ್ಟರೆ ನಾಲ್ಕು ಮೊಲೆಯ ಹಸುವಾಯಿತ್ತು. ಹಸುವಿನ ಬಸಿರಲ್ಲಿ ಕರುವು ಹುಟ್ಟಿತ್ತು. ಕರುನ

೧೩೪. ನಾನು ನಿನಗೊಲಿದೆ. ನೀನು ಎನಗೊಲಿದೆ. ನೀನೆನ್ನ ನಗಲದಿಪ್ಪೆ. ನಾ ನಿನ್ನನಗಲದಿಪ್ಪೆನಯ್ಯ. ನಿನಗೆ ನನಗೆ ಬೇರೊಂದು ಠಾವುಂಟೇ? ನೀನು ಕರುಣಿ ಎಂಬುದ ನಾನು ಬಲ್ಲೆನು. ನೀನಿರಿಸಿದ ಗತಿಯೊಳಗೆ ಇಪ್ಪಳಾನಯ್ಯ. ನೀನೇ ಬಲ್ಲೆ ಚನ್ನಮಲ್ಲಿಕಾರ್ಜುನಾ.

೧೩೫. ಇಂದ್ರ ನೀಲಗಿರಿಗಳನೇರಿಕೊಂಡು, ಚಂದ್ರ ಶಿಲೆಗಳ ಮೆಟ್ಟಿಕೊಂಡು, ಕೊಂಬ ಬಾರಿಸುತ, ಹರನೇ ಎನ್ನ ಕುಂಭ ಕುಚದ ಮೇಲೆ ನಿಮ್ಮನ್ನೈದಿಪ್ಪೆಕೊಂಬೆನಯ್ಯ! ಅಂಗ ಭಂಗ ಮನ ಭಂಗವಳಿದು, ನಿಮ್ಮನೆಂದಿಗೊಮ್ಮೆ ನೆರೆವೆನೋ ಚನ್ನಮಲ್ಲಿಕಾರ್ಜುನಾ?

ನೆರೆ = ಕೂಡು, ಏಕಾಕಾರವಾಗು.

೧೩೬. ತಾನು ದಂಡುಮಂಡಲಕ್ಕೆ ಹೋದನೆಂದೊಡೆ, ನಾನು ಸುಮ್ಮನಿಹೆನಲ್ಲವೆ, ತಾನೆನ್ನ ಕೈಯೊಳಗಿರ್ದು ಎನ್ನ ಮನದೊಳಗಿರ್ದು, ಎನ್ನ ಕೂಡದಿರ್ದೊಡೆ, ನಾನೆಂತು ಸೈರಿಸುವೆನವ್ವಾ! ನೆನಹೆಂಬ ಕುಂಟಣಿ ಚನ್ನಮಲ್ಲಿಕಾರ್ಜುನನ ನೆರೆಯದಿರ್ದೊಡೆ, ಆನೇವೆ ಸಖಿಯೋ?

ಲಿಂಗದ ವಿಕಳಾವಸ್ಥೆ.

೧೩೭. ಬಂಜೆ ಬೇನೆಯನರಿಯಳು. ಬಲದಾಯಿ ಮುದ್ದ ಬಲ್ಲಳೇ? ನೊಂದ ನೋವ ನೋಯದವರೆತ್ತ ಬಲ್ಲರು? ಚನ್ನಮಲ್ಲಿಕಾರ್ಜುನ, ನೀನಿರಿದಲಗು ಒಡಲಲ್ಲಿ ಮುರಿದು ಹೊರಳುವಳ ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ?

ಬಲದಾಯಿ = ಮಲತಾಯಿ; ಅಲಗು = ಕತ್ತಿ.

೧೩೮. ಮಚ್ಚು ಅಚ್ಚುಗವಾಗಿಪ್ಪ ಪರಿಯ ನೋಡಾ! ಎಚ್ಚರ ಗರಿದೋರದಂತಿರಬೇಕು. ಅಪ್ಪಿದರೆ ಅಸ್ಥಿಗಳು ನುಗ್ಗು ನುರಿಯಾಗಬೇಕು. ಬೆಚ್ಚಡೆ ಬೆಸುಗೆಯುರಿಯದಂತಿರಬೇಕು. ಮಚ್ಚು ಒಪ್ಪಿತ್ತು ಚನ್ನಮಲ್ಲಿಕಾರ್ಜುನಯ್ಯನ ಸ್ನೇಹ.

ಮಚ್ಚು = ಪ್ರೀತಿ; ಅಚ್ಚುಗ = ಆಕೃತಿ, ಗಟ್ಟಿಯಾಗಿರುವ ಸ್ಥಿತಿ; ಬೆಚು = ಕೊಡು; ಬೆಸುಗೆ = ಪದರು; ಸ್ನೇಹ = ಪ್ರೀತಿ.

6787

೧೩೯. ಕಳವಳದ ಮನವು ತಲೆ ಕೆಳಗಾದುದವ್ವಾ! ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ! ಬೆಳುದಿಂಗಳು ಬಿಸುಲಾಯಿತ್ತು ಕೆಳದಿ. ಹೊಳಲು ಸುಂಕಿಗನಂತೆ ತೊಳಲುತ್ತಿದ್ದೆನವ್ವಾ! ತಿಳುಹಾ ಬುದ್ಧಿಯ. ಹೇಳಿ ಕರೆತಾರೆಲಗಾ! ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ.

ಹೊಳಲು = ಊರು; ಸುಂಕಿಗ = ಜಕಾತಿಯನ್ನು ತೆಗೆದುಕೊಳ್ಳುವವ; ಮುನಿಸು = ಸಿಟ್ಟು.

೧೪೦. ಒಮ್ಮೆ ಕಾಮನ ಕಾಲ ಹಿಡಿವೆ. ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲೀ ವಿರಹವ. ನಾನಾರಿಗೆ ಧೃತಿಗೆಡುವೆ? ಚನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವಾ.

ಧೃತಿ = ಧೈರ್ಯ; ಹಂಗಿತಿ = ಆಶ್ರಯವನ್ನು ಕೋರುವವಳು.

೧೪೧. ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು, ದೇವಾಂಗವನುಟ್ಟು, ಪುರುಷ ಬಾರಾ! ನಿನ್ನ ಬರವೆನ್ನ ಸುವಿನ ಬರವು ಬಾರಯ್ಯ! ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು.

ಮಿಯು = ಲೇಪಿಸು; ಹೊಂದುಡಿಗೆ = ಬಂಗಾರದ ಉಡಿಗೆ, ಬಣ್ಣದ ವಸ್ತ್ರ; ದೇವಾಂಗ = ಅರಿವೆ, ಬಟ್ಟೆ.

೧೪೨. ಅಳಿ ಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದ ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ.

೧೪೩. ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಕೊಳನ ತಡೆಯೊಳಾಡುವ ಹಂಸೆಗಳಿರಾ, ನೀವು

ಕಾಣಿರೆ, ನೀವು ಕಾಣಿರೆ. ಗಿರಿಗಂಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಚನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ, ನೀವು ಹೇಳಿರೆ.

ಓದು= ಒದರು; ಎರಗು = ಮೇಲೆ ಬಂದು ಬೀಳು; ಕೊಳ= ಸರೋವರ.

೧೪೪. ಇಂದೆನ್ನ ಮನೆಗೆ ಗಂಡ ಬಂದಿಹನೆಲಗವ್ವಾ. ನಿಮು ನಿಮಗೆಲ್ಲಾ ಶೃಂಗಾರವ ಮಾಡಿಕೊಳ್ಳಿ ಚನ್ನಮಲ್ಲಿಕಾರ್ಜುನನೀಗಳೆ ಬಂದಿಹನು. ಇದಿರುಗೊಳ್ಳಬನ್ನಿರೆ ಅವ್ವಗಳಿರಾ.

೧೪೫. ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆ, ನೋಡಯ್ಯ; ಇರುಳು ನಾಲ್ಕು ಜಾವ ನಿಮ್ಮ ವಿಕಳಾವಸ್ಥೆಯಲ್ಲಿರ್ಪೆ, ನೋಡಯ್ಯ; ಇರುಳು ಹಗಲು ನಿಮ್ಮ ಕಳವಳದಲ್ಲಿ ಮರೆದೊರಗಿದೆನಯ್ಯಾ. ಚನ್ನಮಲ್ಲಿಕಾರ್ಜುನಾ, ನಿಮ್ಮೊಲುಮೆ ಸಟ್ಟು ಹಸಿವು ತೃಷೆ ನಿದ್ರೆಯ ಮರೆತೆನು.

ಕಳವಳ =ಚಿಂತೆ; ವಿಕಳ= ಉದ್ವೇಗ.

೧೪೬. ಬಂದಹನೆಂದು ಬಟ್ಟೆಯ ನೋಡಿ, ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ! ತಡವಾದೊಡೆ ಬಡವಾದೆ, ತಾಯೆ. ಚನ್ನಮಲ್ಲಿಕಾರ್ಜುನ ಒಂದಿರುಳಗಲಿದೊಡೆ ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವಾ.

ಬಟ್ಟೆ= ದಾರಿ; ಬಡವಾಗು= ಸಣ್ಣವಾಗು, ಸೊರಗು; ಇರುಳು = ರಾತ್ರಿ; ಜಕ್ಕವಕ್ಕಿ =ಚಕ್ರವಾಕ ಪಕ್ಷಿ.

೧೪೭. ಕೂಡಿ ಕೂಡುವ ಸುಖದಿಂದೆ ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು ಕೆಳದಿ. ಒಚ್ಚತ ಅಗಲಿರೆ, ಕಾಣದೆ ಇರಲಾರೆ. ಎನ್ನ ದೇವ ಚನ್ನಮಲ್ಲಿಕಾರ್ಜುನನಗಲಿಯಗಲದ ಸುಖವೆಂತಪ್ಪುದೋ ?

ಒಪ್ಪಚ್ಚಿ = ಸ್ವಲ್ಪ; ಒಚ್ಚತ = ಆನಂದ.

೧೪೮. ಲಿಂಗಸುಖಸಂಗದಲ್ಲಿ ಮನ ವೇದ್ಯವಾಯಿತ್ತು. ಇನ್ನೆಲ್ಲಿಯದಯ್ಯ ? ಎನಗೆ ನಿಮ್ಮಲ್ಲಿ ನಿರವಯವು ಇನ್ನೆಲ್ಲಿಯದಯ್ಯ ? ನಿಮ್ಮಲ್ಲಿ ಕೂಡುವದು ಪರಮ ಸುಖ. ಪರಿಣಾಮ ಮನ ಮೀರಿದಪ್ಪಿ, ನಾನು ನಿಜವನ್ನೈದುವುದ ಹೇಳಾ ಚನ್ನಮಲ್ಲಿಕಾರ್ಜುನಯ್ಯ.

ವೇದ್ಯವಾಗು= ಗೊತ್ತಾಗು; ನಿರವಯ= ನಿರಾಕಾರ, ಐಕ್ಯಭಾವವು.

೧೪೯. ಗಿರಿಯೊಳು ವನದೊಳು ಗಿಡಗಿಡದತ್ತ ದೇವ ಎನ್ನ ದೇವ ಬಾರಯ್ಯಾ. ತೋರಯ್ಯಾ ನಿಮ್ಮ ಕರುಣವನೆಂದು ನಾನು ಅರಸುತ್ತ ಅಳಲುತ್ತ ಕಾಣದೆ ಸುಳಿದು ಬಂದು ಕಂಡೆ ಶರಣರ ಸಂಗದಿಂದ. ಅರಸಿ ಹಿಡಿದಿಹೆನೆಂದು ನೀನಡಗುವ ಠಾವ ಹೇಳಾ ಚನ್ನಮಲ್ಲಿಕಾರ್ಜುನಾ.

೧೫೦ ಒಡಲಿಲ್ಲದ, ನುಡಿ ಇಲ್ಲದ, ಕಡೆ ಇಲ್ಲದ, ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯ. ಓಸರಿಸೆನನ್ಯಕ್ಕೆ ಆಸೆ ಮಾಡೆನು, ಮತ್ತೆ ಭಿನ್ನ ಸುಖಕ್ಕೆ. ಆರಳಿದು ಮೂರಾಗಿ, ಮೂರಳಿದು ಎರಡಾಗಿ, ಎರಡಳಿದು ಒಂದಾಗಿ ನಿಂದೆನಯ್ಯ. ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ. ಪ್ರಭುವಿನಿಂದ ಕೃತಕೃತ್ಯಳಾದೆನು. ನಾನು ಮರೆಯಲಾಗದು. ನಾನು ನಿಮ್ಮನರಸುವೆನೆಂದು ಎನ್ನನು ಚನ್ನಮಲ್ಲಿಕಾರ್ಜುನನ ಬೆರಿಸೆಂದು ಹರಿಸುತಿಹಳು.

೧೫೧. ಉರಿಯ ಫಣಿಯನೆ ಉಡಿಸಿ, ಊರಿಂದ ಹೊರಗಿರಿಸಿ ಕರೆಯಲಟ್ಟಿದ ಸುಖಿಯ ನೆರೆದೆ ನೋಡೆಲೆಗವ್ವಾ! ತೂರ್ಯಾವಸ್ಥೆಯಿಂದ ಹಿರಿದು ದುಃಖ ಕರ ಬೆಂದು ಗಿರಿ ಬೆಂದು ಹೊನ್ನರಳಿಯ ಮರನುಳಿದು ಹಿರಿಯಾತನನಗಡಿಸಿ ನೆರೆವೆನು ಚನ್ನಮಲ್ಲಿಕಾರ್ಜುನನ.

೧೫೨. ಎರೆಯಂತೆ ಕರಕರಗಿ ಮಳಲಂತೆ ಜರಿದು ಕನಸಿನಲಿ ಕಳವಳಿಸಿ ಆನು ಬೆರಗಾದೆ. ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ. ಆಪತ್ತಿಗೆ ಸಖಿಯರ ನಾನಾರುವನು ಕಾಣೆ. ಅರಸಿ ಕಾಣದ ತನುವ ಬೆರಸಿ ಕೂಡದ ಸುಖವ ಎನಗೆ ನೀ ಕರುಣಿಸು ಚನ್ನಮಲ್ಲಿಕಾರ್ಜುನಾ.

ಪರಮಾತ್ಮನಲ್ಲಿ ಸಾಮರಸ್ಯ ಭಾವ.

೧೫೩. ಅಯ್ಯಾ, ದೂರದಲಿರ್ದಿಹೆ ಎಂದು ಬಾಯಾರಿ ಬಳಲುತ್ತಿರ್ದೆನಯ್ಯಾ ನಾನು. ಅಯ್ಯಾ ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ, ಇನ್ನಾ ರತಿ ಎಲ್ಲವೂ ಲಿಂಗ. ಆಲಿ ನಿಮ್ಮಲ್ಲಿ ನಟ್ಟವು ನೋಡಯ್ಯಾ. ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೇ ಪ್ರಾಣವಾಗಿರ್ದೆನಯ್ಯಾ

ಸಾರಿ ಬರು = ಸಮೀಪಕ್ಕೆ ಬರು; ರತಿ = ಪ್ರೀತಿ; ಆಲಿ = ದೃಷ್ಟಿ.

೧೫೪ ಸೆಜ್ಜೆಯುಪ್ಪರಿಸಿ ಶಿವಲಿಂಗ ನೀನೆನ್ನ ಕರಸ್ಥಲಕ್ಕೆ ಬರೆ, ಪ್ರಜ್ವಲಿಸಿ ತೊಳತೋಗಿದೆ. ಬೆಳಗುತ್ತಿಹ ಕಾಂತಿಯಲಿ ಜಜ್ಝರಿಸಿ ತನುಮನ ದೃಷ್ಟಿ ನಟ್ಟು, ಲಿಂಗದಲ್ಲಿ ಒಜ್ಜರಿಸಿ ಸುರಿವ ಶಿವಸುಖರತಿಯೊಳೋಲಾಡುತ್ತ, ಸಜ್ಜನ ಸದ್ಭಕ್ತಿ ರತಿಯೊಡನೆ ಕೂಡಿಯಾಡಿ, ಲಜ್ಜೆಗೆಟ್ಟು ನಿಮ್ಮ ನೆರೆವೆ ಚನ್ನಮಲ್ಲಿಕಾರ್ಜುನ.

ಸೆಜ್ಜೆ = ಹಾಸಿಗೆ; ಉಪ್ಪರಿಸು = ಮೇಲೆ ಇರು; ಪ್ರಜ್ವಲಿಸು= ಪ್ರಕಾಶಿಸು; ತೊಳಗು= ಹೊಳೆಯು; ಜಜ್ಝರಿಸು= ತುಣಕು ತುಣಕಾಗು; ಒಜ್ಜರ= ಝುರಿ; ಒಜ್ಜರಿಸು= ನೀರಿನಂತೆ ಹೊರಬೀಳು.

೧೫೫. ಗಟ್ಟಿದುಪ್ಪ ತಿಳಿದುಪ್ಪಕ್ಕೆ ಭೇದವುಂಟೇ ? ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ ? ಆತ್ಮಕ್ಕೆ ಅಂಗಕ್ಕೆ ಭೇದವುಂಟೇ ಅಯ್ಯಾ ? ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ, ಸಾವಯವಕ್ಕೆ ನಿರವಯಕ್ಕೆ ಭಿನ್ನವಿಲ್ಲವಯ್ಯಾ ? ಚನ್ನಮಲ್ಲಿಕಾರ್ಜುನ ದೇವರ ಬೆರಸಿ ಮತಿಗೆಟ್ಟವಳ ಏನ ನುಡಿಸುವಿರಯ್ಯಾ ?

ದೀಪ್ತಿ= ಪ್ರಕಾಶ.

೧೫೬. ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯಾ ! ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯಾ! ನೀನೊಲ್ಲದ ಸುಖವೇ ದುಃಖ ಕಂಡಯ್ಯಾ! ನೀನೊಲಿದ ದುಃಖವೇ ಪರಮ ಸುಖ ಕಂಡಯ್ಯಾ! ಚನ್ನಮಲ್ಲಿಕಾರ್ಜುನಯ್ಯಾ ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು.

ಅರಿಕೆ= ಅಜ್ಞಾನ; ನಿರ್ಬಂಧನ =ಸ್ವತಂತ್ರತೆ.

ಶರಣಸ್ಥಲ.

ಲಿಂಗಜ್ಞಾನ.

೧೫೭ ಗಂಗೆಯೊಡನಾಡಿದ ಗಟ್ಟ ಬೆಟ್ಟಂಗಳು ಕೆಟ್ಟು ಕೇಡ ನೋಡಯ್ಯಾ! ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟುಕೇಡ ನೋಡಯ್ಯಾ ! ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಯ್ಯಾ! ಜ್ಞಾನಿಯೊಡನಾಡಿದ ಅಜ್ಞಾನ ಕೆಟ್ಟ ಕೇಡ ನೋಡಯ್ಯಾ! ಇಂತೀ ಪರಶಿವಮೂರ್ತಿ ಹರನೇ, ನಿಮ್ಮ ಜಂಗಮಲಿಂಗದೊಡನಾಡಿ ಎನ್ನ ಭವಾದಿ ಭವಂಗಳು ಕೆಟ್ಟ ಕೇಡ ನೋಡಾ ಚನ್ನಮಲ್ಲಿಕಾರ್ಜುನಾ.

೧೫೮. ಘನವ ಕಂಡೆ, ಅನುವ ಕಂಡೆ, ಆಯತವ ಕಂಡೆ, ಸ್ವಾಯತವ ಕಂಡೆ, ಸನ್ನಿಹಿತವ ಕಂಡೆ. ಅರಿವನರಿದು ಮರಹ ಮರೆದೆ. ಕುರುಹಿನ ಮೋಹದ ಮರವೆಯನೀಡಾಡಿದೆ. ಚನ್ನಮಲ್ಲಿಕಾರ್ಜುನ, ನಿಮ್ಮನರಿದು ಸೀಮೆಗೆಟ್ಟೆನು.

ಈಡಾಡು= ಒಗೆದುಬಿಡು.

೧೫೯. ಎಲ್ಲ ಎಲ್ಲವನರಿದು ಫಲವೇನಯ್ಯಾ, ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೇ ? ಚನ್ನಮಲ್ಲಿಕಾರ್ಜುನ ನೀ ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದಲರಿದೆನಯ್ಯಾ ಪ್ರಭುವೇ.

೧೬೦. ಆಕಾರವಲ್ಲದ ನಿರಾಕಾರದ ಲಿಂಗವ ಕೆಯ್ಯಲ್ಲಿ ಹಿಡಿದು, ಕೊರಳಲ್ಲಿ ಕಟ್ಟಿದೆವೆಂದೆಂಬರು ನರಕಿ ಜೀವಿಗಳು. ಹರಿಬ್ರಹ್ಮರು ವೇದ

ಶಾಸ್ತ್ರಂಗಳನರಸಿ ಕಾಣದ ಲಿಂಗ, ಭಕ್ತಿಗೆ ಫಲಪದಂಗಳಲ್ಲದೆ ಲಿಂಗವಿಲ್ಲ. ಕರ್ಮಕ್ಕೆ ನರಕವಲ್ಲದೆ, ಲಿಂಗವಿಲ್ಲ. ವೈರಾಗ್ಯಕ್ಕೆ ಮುಕ್ತಿಯಲ್ಲದೆ, ಲಿಂಗವಿಲ್ಲ. ಜ್ಞಾನಕ್ಕೆ ಪರಿಭ್ರಮಣವಿಲ್ಲದೆ, ಲಿಂಗವಿಲ್ಲ. ಇದು ಕಾರಣ ಅದ್ವೈತದಿಂದ ತನ್ನ ತಾನರಿದು ತಾನಾದರೆ ಚನ್ನಮಲ್ಲಿಕಾರ್ಜುನಲಿಂಗ ತಾನೆ ಬೇರಿಲ್ಲ.

ಪರಿಭ್ರಮಣ=ತಿರುಗಾಟ, ಗೊಂದಲ.

೧೬೧. ಅರಿವು ಸಾಧ್ಯವಾಯಿತ್ತೆಂದು ಗುರು ಲಿಂಗ ಜಂಗಮವ ಬಿಡಬಹುದೇ ? ಸಂದು ಸಂಶಯವಳಿದು ಅಖಂಡ ಜ್ಞಾನವಾಯಿತ್ತೆಂದು ಪರಧನ ಪರಸ್ತ್ರೀಗೆಯಳುಪಬಹುದೆ ? "ಯತ್ರ ಜೀವಸ್ತತ್ರ ಶಿವಃ" ಎಂಬ ಅಭಿನ್ನ ಜ್ಞಾನವಾಯಿತ್ತೆಂದು ಶುನಕ ಸೂಕರ ಕುಕ್ಕುಟ ಮಾರ್ಜಾಲಗಳ ಕೂಡಿ ಭುಂಜಿಸಬಹುದೇ ? ಭಾವದಲ್ಲಿ ತನ್ನ ನಿಜದ ನೆಲೆಯನರಿವುತ್ತಿಹುದು. ಸುಜ್ಞಾನ ಸತ್ಕ್ರಿಯಾ ಸುನೀತಿ ಸುಮಾರ್ಗದಲ್ಲಿ ವರ್ತಿಸುವುದು. ಹೀಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದ ಹಾಗೆ ಮೀರಿ ನುಡಿದು ನಡೆದನಾದೊಡೆ ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೇ ಚನ್ನಮಲ್ಲಿಕಾರ್ಜುನಯ್ಯನು ?

ಅಳುಪು = ತೊಂದರೆಕೊಡು; ಸೂಕರ = ಹಂದಿ; ಕುಕ್ಕುಟ = ಕೋಳಿ, ಮಾರ್ಜಾಲ = ಬೆಕ್ಕು; ಶುನಕ, ಶ್ವಾನ= ನಾಯಿ.

೧೬೨. ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ, ಜಲವರತ ತಟಾಕದಂತೆ, ಬೆಂದ ನುಲಿಯಂತೆ, ಮತ್ತೆ ಹಿಂದಣ ಹಂಗುಂಟೇ ಅಣ್ಣಾ ಚನ್ನಮಲ್ಲಿಕಾರ್ಜುನನೇ ಆಶ್ರಯವಾದವಳಿಗೆ ?

ಅರತ = ಒಣಗಿದ; ತಟಾಕ = ಕೆರೆ.

೧೬೩. ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ. ಮನದ ಭಂಗವ ಅರಿವಿನ ಮುಖದಲ್ಲಿ ಗೆಲಿದೆ. ಜೀವನ ,ಭಂಗವ ಶಿವಾನುಭಾವದಿಂ ಗೆಲಿದೆ. ಕರಣದ ಕತ್ತಲೆಯ ಬೆಳಗಸುಟ್ಟು ಗೆಲಿದೆ. ಜವ್ವ

ನದ ಹೊರ ಮಿಂಚಿನಲ್ಲಿ ನಿಮ್ಮ ಕಣ್ಣಿಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ. ಚನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳಿದರೆ ಮನಸಿಜನ ತಲೆಯ ಬರಹ ತೊಡೆದನು.

ಶರಣನು ನಿರ್ಲೇಪನು

೧೬೪. ಲೋಕವಿಡಿದು ಲೋಕವ ಹಿಂಗಿದಂತಿಪ್ಪೆನು. ಆಕಾರವಿಡಿದು ಸಾಕಾರ ಸಹಿತ ನಡೆವೆನು. ಹೊರಗೆ ಬಳಸಿ ಒಳಗೆ ಮರೆದಂತಿಪ್ಪೆನು. ಬೆಂದ ನುಲಿಯಂತೆ ಹುರಿಗುಂದದಂತಿಪ್ಪೆನು. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಾ ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು.

ಬಳಸು = ವ್ಯವಹರಿಸು.

೧೬೫. ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿಹುದು. ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿಹುದು. ಲೋಕವೆಂಬ ಮಾಯೆಗೆ ಶಿವಶರಣರ ಚರಿತ್ರ ಮರುಳಾಗಿ ತೋರಿಹುದು. ಚನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆಯೂ ಇಲ್ಲ. ಮರಹೂ ಇಲ್ಲ. ಅಭಿಮಾನವೂ ಇಲ್ಲ.

೧೬೬. ಹಣ್ಣು ಮಾಗಿದ್ದ ಬಳಿಕ ಆ ಮರವನಾರು ತರಿದರೇನು ? ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು ? ಮಣ್ಣು ಬಿಟ್ಟ ಬಳಿಕ ಆ ಕೆಯ್ಯಿಯನಾರುತ್ತರೇನು ? ಚನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ ನಾಯಿ ತಿಂದರೇನು ? ನೀರ ಕುಡಿದರೇನು ?

ಕೆಯ್ಯಿ = ಹೊಲ; ಉತ್ತು = ಕಿಕ್ಕು, ರೆಂಟೆಹೊಡೆ.

---

೧೮೪. ಹೊಳೆವ ಕೆಂಜೆಡೆಗಳು, ಮಣಿ ಮುಕುಟ, ಒಪ್ಪುವ ಸುಲಿಪಲ್ಲ, ನಗೆ ಮೊಗದ ಕಂಗಳ ಕಾಂತಿಯಿಂ ಈರೇಳು ಭವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು. ಗಂಡ ಗಂಡರೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು. ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ ಪರಮ ಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

ಮುಕುಟ = ಕಿರೀಟ; ಈರೇಳು = ಹದಿನಾಲ್ಕು

The Vijay College
LIBRARY,
VIJAY COLLEGE,
BIJAPUR.

VIJAY COLLEGE
LIBRARY

DUE DATE SLIPS.

1	2	3	4	5
29 SEP 1955				
14 SEP 1956				
7 MAR 1960				

ಇದನ್ನು ವಿಜಾಪುರದಲ್ಲಿ
ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ
" ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ " ನಲ್ಲಿ ಮುದ್ರಿಸಿದರು.
ಮತ್ತು ಅವರು ಅಲ್ಲಿಯೇ
ಪ್ರಕಟಿಸಿದರು.